## 13

# ತೆರೆದ ಪತ್ರ

## ಆರಾಧನೆಯಲ್ಲಿ ವಾದ್ಯಗಳನ್ನುಬಯಸುವವರಿಗೆ

ಪ್ರಿಯ ಸ್ನೇಹಿತರೆ:

ಆರಾಧನೆಯ ಕುರಿತಾಗಿ ಹೊಸ ಒಡಂಬಡಿಕೆಯು ಏನನ್ನು ಉಪದೇಶಿಸುತ್ತದೆ ಎಂದು ನೀವು ಬಯಸುವ ವಿಷಯವನ್ನು, ನಾವೆಲ್ಲರು ಒಟ್ಟಾಗಿ ಅಭ್ಯಾಸಿಸುವ.

ಹೊಸ ಒಡಂಬಡಿಕೆಯ ಕಾಲದಲ್ಲಿ, ವಾದ್ಯಗಳನ್ನು ಉಪಯೋಗಿಸಿ ಆರಾಧನೆಯನ್ನು ಮಾಡುವ ವಿಷಯದಲ್ಲಿ ಕೂಲಂಕುಷ ಪರಿಶೀಲನೆಯ ಅಗತ್ಯವಿದೆ, ಆದಾಗ್ಯೂ ದೀಕ್ಷಾಸ್ನಾನದ ಕುರಿತಾಗಿ ಇರುವ ವಿಷಯದಷ್ಟು ಸ್ಪಷ್ಟತೆ ಸಂಗೀತದ ಕುರಿತಾಗಿ ಇರುವದಿಲ್ಲ, ಅದರ ಕುರಿತಾಗಿ ಬಲವಾದ ಸಾಕ್ಷಿಯು ಇಲ್ಲದೆ, ಇರುವದರಿಂದ ಅದನ್ನು ಅಲಕ್ಷ ಮಾಡಬಹುದು ಎಂಬುದಾಗಿ ಇರುವದಿಲ್ಲ. ಈ ಕುರಿತಾಗಿ ದೇವರು ಬಯಸುವ ಹಾಗೂ ಗ್ರಂಥಗಳು ತಿಳಿಸುವ ಸಂಗತಿಗಳನ್ನು ನಾವು ತಿಳಿದುಕೊಳ್ಳಬೇಕು, ಬರವಣಿಗೆಯ ಮುಖಾಂತರ ದೇವರು ತನ್ನ ಚಿತ್ತವನ್ನು ನೀಡಿದ್ದಾನೆ, ನಮ್ಮ ಆಚರಣೆಗಳಿಗೆ, ಅದೇ ಮೂಲವಾಗಿರುತ್ತದೆ.[1]

ದೇವರೊಂದಿಗಿನ ಸಂಬಂಧದಲ್ಲಿ, ನಾವು ನಮ್ಮನ್ನೆ ಅವಲಂಭಿಸಬಾರದೆಂದು ಗ್ರಂಥವು ತಿಳಿಸುತ್ತದೆ (ಜ್ಞಾನೋಕ್ತಿ 14:12; ಯೆರೆಮೀಯ 10:23). "ಪರಿಸಾಯರು ಗ್ರಂಥಗಳನ್ನಾಗಲೀ ಅಥವಾ ದೇವರ ಶಕ್ತಿಯನ್ನಾಗಲೀ ಅರಿತಿರಲಿಲ್ಲವೆಂದು," ಇದರ ನಿಮಿತ್ತ ಅವರು ಯಾವಾಗಲು ತಪ್ಪುವವರು ಎಂದು ಯೇಸು ತಿಳಿಸಿದನು (ಮತ್ತಾಯ 22:29). ಯಾರ್‍ಯಾರು ಆತನ ಬೋಧನೆ ಯನ್ನು ತಿರಸ್ಕರಿಸುವರು, ಅದರಿಂದಲೇ ನ್ಯಾಯನಿರ್ಣಯ ಹೊಂದುವರು ಎಂದು ಯೇಸು ತಿಳಿಸಿದನು (ಯೋಹಾನ 12:48-50). ನಾವು ಆತನನ್ನು ಮೆಚ್ಚಿಸಲಾರೆವು ಎಂಬ ಭಯದಿಂದ, ನಾವು ಆತನ ಸೇವೆಯನ್ನು ಮಾಡದೆ, ಆತನ ಚಿತ್ತವನ್ನು ಅಲಕ್ಷಮಾಡುವದರಿಂದಲೂ, ಆತನನ್ನು ಮೆಚ್ಚಿಸಲಾರೆವು (ಇಬ್ರಿಯ 10:31).

ಆರಾಧನೆಯಲ್ಲಿ, ವಾದ್ಯಗಳನ್ನು ನುಡಿಸುವ ಕುರಿತು ಹೊಸ ಒಡಂಬಡಿಕೆ ಏನನ್ನು ತಿಳಿಸುತ್ತದೆ? ದೇವರು ಬಯಸುವ ಸಂಗೀತ ಯಾವುದು ಎಂದು ಪರಿಶೀಲಿಸೋಣ.

*ಮೊದಲ ಶತಮಾನದ ಸಭೆಯಲ್ಲಿ ಇದ್ದ ಸಂಗೀತದ ಬಗ್ಗೆ ಹೊಸ ಒಡಂಬಡಿಕೆ ಏನನ್ನು ತಿಳಿಸುತ್ತದೆ? ದೇವರು ಬಯಸುವ ಸಂಗೀತ ಯಾವುದು ಎಂದು ಪರಿಶೀಲಿಸೋಣ.* ಮೊದಲ ಶತಮಾನದ ಸಭೆಯಲ್ಲಿ ಇದ್ದ ಸಂಗೀತದ ಬಗ್ಗೆ ಹೊಸ ಒಡಂಬಡಿಕೆಯು ಏನು ಹೇಳುತ್ತದೆ. ಮತ್ತು ಆ ಸಂಗೀತದ ಉದ್ದೇಶವೇನು ಎಂಬುದು ನಮ್ಮ ಮೊದಲ ಅಂಶವಾಗಿದೆ. ನಾವು ಧ್ಯಾನಿಸುವಂತ ವಾಕ್ಯಗಳು ಒಟ್ಟಾಗಿ ಆರಾಧಿಸುವ ಅಥವಾ ವಯಕ್ತಿಕವಾಗಿ ಆರಾಧಿಸುವ ಕುರಿತು ಸ್ಪಷ್ಟತೆಯನ್ನು ನೋಡೋಣ.

ಕಡೇಯ ರಾತ್ರಿ ಬೋಜನದಲ್ಲಿ, ಯೇಸು ಮತ್ತು ಆತನ ಶಿಷ್ಯರು ಒಂದು ಸಂಗೀತ ವನ್ನು ಹಾಡಿದರು (ಮತ್ತಾಯ 26:30; ಮಾರ್ಕ 14:26). ಪಸ್ಕ ಹಬ್ಬದ ಕುರಿತ ಕೀರ್ತನೆಯಿಂದ ಆಯ್ಕೆಮಾಡಿದ ಭಾಗವನ್ನೆ ಹಾಡಿರಬಹುದು (ಕೀರ್ತನೆ 113-118; 136). ಇದು ಪಸ್ಕ ಹಬ್ಬದ ಹಿಂದಿನ ವಾಕ್ಯವಾಗಿದೆ (ಲೂಕ 22:7, 8).

1 ಕೊರಿಂಥದ ಸಭೆಯಲ್ಲಿ ನಡಕೊಳ್ಳಬೇಕಾದ ರೀತಿಯನ್ನು ಪೌಲನು ತಿಳಿಸಿರುವನು ಹಾಡುವುದು ಸಹ ಒಂದು ಸ್ಪಷ್ಟವಾದ ಚಟುವಟಿಕೆಯಾಗಿರುತ್ತದೆ, ಸರಿಯಾದ ಭಾವದಿಂದ, ಮತ್ತು ತಿಳುವಳಿಕೆಯಿಂದ ಹಾಡಿರಿ ಎಂದು ಪೌಲನು ಎಚ್ಚರಿಸಿದನು, "ನಾನು ಆತ್ಮದಿಂದ

ಹಾಡುವೆನು ಮತ್ತು ಬುದ್ಧಿಯಿಂದಲೂ ಹಾಡುವೆನು'' (14:15ಬಿ) ಸಭೆಯಲ್ಲಿ ಒಬ್ಬನು "ಹಾಡುವುದು'' ("ಗೇತ'' 14:26; NIV) ಎಂಬುದಾಗಿದೆ. ಇವೆಲ್ಲವುಗಳ ಮೂಲಕ ಉತ್ತೇಜನ ಉಂಟಾಗಬೇಕು ಎಂಬುದು ಪೌಲನ ತಾತ್ಪರ್ಯ. (ಅದು ಸಲಹೆ ಸೂಚನೆ). ಆ ಅಧ್ಯಾಯದಲ್ಲಿ ಪೂರ್ತಿಯಾಗಿ ಇದನ್ನೆ ತಿಳಿಸಿರುವನು (ವಚನಗಳು 4, 5, 17). ಅದರಲ್ಲಿ ಹಾಡುವುದು ಒಂದು ಚಟುವಟಿಕೆಯಾಗಿದೆ, ಅದನ್ನು ಇತರರಿಗೆ ತಿಳಿಸಬೇಕು.

ಎಫೆಸ 5:19, 20ರಲ್ಲಿ ಈ ಸೂಚನೆಯನ್ನು ನೋಡುತ್ತೇವೆ. ಒಟ್ಟಾಗಿ ಸೇರಿಸುವಿಕೆಯ ಕುರಿತು ಕ್ರೈಸ್ತರಿಗೆ ಪೌಲನು ಮಾರ್ಗದರ್ಶನ ಮಾಡಿದನು. (ಒಬ್ಬರಿಗೊಬ್ಬರು ಎಂಬ ವ್ಯಾಖ್ಯಾನ) ಆದರೆ ಪವಿತ್ರಾತ್ಮ ಭರಿತರಾಗಿದ್ದು. ಕೀರ್ತನೆಗಳಿಂದಲೂ ಆತ್ಮಸಂಬಂಧವಾದ ಪದಗಳಿಂದಲೂ ಒಬ್ಬರಿಗೊಬ್ಬರು ಮಾತಾಡಿಕೊಳ್ಳುತ್ತಾ ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಗಾನ ಮಾಡುತ್ತಾ ಕೀರ್ತನೆ ಹಾಡುತ್ತಾ ಯಾವಾಗಲೂ ಎಲ್ಲಾ ಕಾರ್ಯಗಳಿಗೋಸ್ಕರ ನಮ್ಮ ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿ ತಂದೆಯಾದ ದೇವರಿಗೆ ಸ್ತೋತ್ರ ಮಾಡಿರಿ. ಪರಸ್ಪರ ಮಾತಿನ ಸಂಪರ್ಕದ ಕುರಿತು ಈ ವಾಕ್ಯ ತಿಳಸುತ್ತದೆ, ದೇವರ ಸ್ತುತಿಯನ್ನು ಹಾಡುಗಳ ಮೂಲಕ ಪ್ರಕಟಿಸಬಹುದು. ಅದು ದೇವರೊಂದಿಗಿನ ಸಂಪರ್ಕವಾಗಿರುವದರಿಂದ, ನಾವು ಹಾಡುವುದು ಉದ್ದೇಶ ಪೂರ್ವಕವಾಗಿದೆ.

ಕೊಲೆಸ್ಸೆ 3:16ರಲ್ಲಿ ಪರಸ್ಪರ ಸೂಚನೆ ಮತ್ತು ದೇವಸ್ತುತಿಯ ಪ್ರೋತ್ಸಾಹವು ಇರುತ್ತದೆ: "ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ, ಸಕಲ ಜ್ಞಾನದಿಂದ ಕೂಡಿದವರಾಗಿ ಒಬ್ಬರಿಗೊಬ್ಬರು ಉಪದೇಶಮಾಡಿಕೊಳ್ಳಿರಿ, ಬುದ್ಧಿ ಹೇಳಿಕೊಳ್ಳಿರಿ. ಕರ್ತನ ಕೃಪೆಯನ್ನು ನೆನಸಿಕೊಳ್ಳುವವರಾಗಿ ಕೀರ್ತನೆಗಳಿಂದಲೂ ಸಂಗೀತಗಳಿಂದಲೂ, ಆತ್ಮಸಂಬಂಧವಾದ ಹಾಡುಗಳಿಂದಲೂ ನಿಮ್ಮ ಹೃದಯಗಳಲ್ಲಿ ದೇವರಿಗೆ ಗಾನ ಮಾಡಿರಿ'' (NIV) "ಈ ಅನುವಾದದಲ್ಲಿ ಎರಡು ಪ್ರತ್ಯೇಕವಾದ ಚಟುವಟಿಕೆಗಳಿವೆ. (1) ಒಬ್ಬರಿಗೊಬ್ಬರು ಉಪದೇಶಮಾಡುವದು ಮತ್ತು (2) ದೇವರಿಗೆ ಗಾನ ಮಾಡುವದು, ಈ ವಾಕ್ಯಭಾಗದಲ್ಲಿ ಹಾಡುವದು ಎಂದರೆ ಪರಸ್ಪರ ಉಪದೇಶಿಸುವದು ಮತ್ತು ಅದೇ ಸಮಯದಲ್ಲಿ ದೇವರನ್ನು ಸ್ತುತಿಸುವದೆಂಬುದಾಗಿದೆ.[2] ನೀವು ಒಬ್ಬರಿಗೊಬ್ಬರು ಉಪದೇಶವನ್ನು ಬುದ್ಧಿಯನ್ನು ಕೀರ್ತನೆಗಳ ಮೂಲಕ, ಸಂಗೀತ (ಮತ್ತು) ಆತ್ಮೀಕ ಸಂಗೀತ (ಮತ್ತು) ಹಾಡುವದರ ಮೂಲಕ ನಿಮ್ಮ ಹೃದಯಗಳಲ್ಲಿ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿರಿ.[3] ಇದಕ್ಕೆ ಅನುಕೂಲವಾಗುವಂತೆ ಕ್ರಿಸ್ತನ ವಾಕ್ಯವು ನಿಮ್ಮಲ್ಲಿ ಸಮೃದ್ಧಿಯಾಗಿ ವಾಸಿಸಲಿ ಎಂಬುದು ಅಕ್ಷರಶಃ ಅನುವಾದವಾಗಿದೆ (ಒತ್ತಿ ಹೇಳಿದ್ದು ನನ್ನದು).

ಇಬ್ರಿಯ ಬರಹಗಾರನು "ಹಾಡು'' ಅಥವಾ "ಹಾಡುವದೆಂಬ'' ಕಠಿಣ ಪದವನ್ನು ಉಪಯೋಗಿಸಲಿಲ್ಲ. ಇಬ್ರಿಯ 13:15. "ಹಾಡುವದು ತುಟಿಗಳ ಫಲ'' ಎಂಬುದಾಗಿ ಸಲಹೆಯನ್ನು ತಿಳಿಸುತ್ತದೆ - ಅದು ದೇವರಿಗೆ ಸ್ತುತಿಯ ಯಜ್ಞವಾಗಿರುತ್ತದೆ.

ನಿಮ್ಮಲ್ಲಿ ಒಬ್ಬನು ಸಂತೋಷಪಡುವವನಿದ್ದಾನೋ? ಅವನು ಕೀರ್ತನೆ ಹಾಡಲಿ ಎಂದು ಯಾಕೋಬನು ತಿಳಿಸಿದ್ದಾನೆ (5:13ಬಿ), ಈ ವಾಕ್ಯದ ಹಿನ್ನಲೆಯಲ್ಲಿರುವ ಚಟುವಟಿಕೆಯು ಸ್ಪಷ್ಟವಾಗಿರುವದಿಲ್ಲ. ಇದೇ ವಾಕ್ಯಭಾಗದಲ್ಲಿ ನಿಮ್ಮಲ್ಲಿ ಅಸ್ವಸ್ಥ ನಾದವನಿದ್ದಾನೋ? ಅವನು ಸಭೆಯ ಹಿರಿಯರನ್ನು ಕರೆಕಳುಹಿಸಲಿ ಎಂದು ತಿಳಿಸಿದ್ದಾನೆ (5:14), ಇದರಲ್ಲಿ ಸಾಮಾನ್ಯ ಸಭೆಯ ಸೇರುವಿಕೆಯು ಹೊರತಾಗಿರುತ್ತದೆ. ಹೇಗೂ ಕೆಲವು ವಚನಗಳ ನಂತರ ಕ್ರೈಸ್ತರು ಪಾಪದ ಅರಿಕೆಯನ್ನು ಹಾಗೂ ಪರಸ್ಪರ ಪ್ರಾರ್ಥನೆಯನ್ನು ಮಾಡಬೇಕೆಂದು ಪ್ರಬೋಧಿಸಿದನು, ಇಲ್ಲಿ ಒಂದು ವಿಧವಾದ ಸಭೆಯ ಸೇರುವಿಕೆಯಿದೆಂಬ ಸೂಚನೆ ಇರುತ್ತದೆ.

ದೇವರ ಸ್ತುತಿಗಾಗಿ ಹಾಡುತ್ತೇವೆ. ಹಾಡುಗಳು ನಮ್ಮನ್ನು ನಾವೇ ತೋರ್ಪಡಿಸಿ ಕೊಳ್ಳುವಂತೆ ಮಾಡುತ್ತದೆ. ಆದುದರಿಂದ ದಾವೀದನು ಮತ್ತು ಇತರರು ವಿಶೇಷವಾಗಿ ಬರೆದ ಕೀರ್ತನೆಗಳು ಜನರ ಹೃದಯಗಳನ್ನು ಸ್ಪರ್ಷಿಸದೇ ಅದು ದೇವರ ಹೃದಯವನ್ನು ಸ್ಪರ್ಷಿಸುತ್ತದೆ.

ಈ ಸೂಚನೆಗಳು ಪರಸ್ಪರರಿಗೆ ಮಾತ್ರ ನಿಯಮಿತವಾಗಿದೆಯೇ (ಅದು ನಮ್ಮ ಸಹೋದರರು ಹಾಗೂ ಸಹೋದರಿಯರು)? ಇಲ್ಲ. ಇಬ್ರಿಯ 2:12, ರೋಮಾಪುರ 15:9 ಹಾಡುಗಳಲ್ಲಿ ಸೇವೆಯ ಸೂಚನೆಯನ್ನು ನೀಡುತ್ತದೆ. ಈ ಎರಡು ವಾಕ್ಯ ಭಾಗದಲ್ಲಿ ದೇವರ ನಾಮವು ಅನ್ಯರಲ್ಲಿ[4] ಪ್ರಚಲಿತವಾಯಿತೆಂದು ಯೇಸುವಿನ ಕುರಿತಾಗಿ ವಿವರಿಸಲಾಗಿದೆ. ಈ ಚಟುವಟಿಕೆಯ ಫಲಿತಾಂಶವೇನೆಂದರೆ, ಅನ್ಯರಲ್ಲಿ ಕೆಲವರು ಕರ್ತನ ಬಳಿಗೆ ಬರುವರು, ಇದು ಯೇಸುವಿನ ಸೇವೆಯ ಒಂದು ಭಾಗವಾಗಿತ್ತೆಂಬುದಾಗಿ ಪೌಲನು ರೋಮಾ ಪತ್ರಿಕೆಯಲ್ಲಿ ತಿಳಿಸಿದ್ದಾನೆ.

ಹಾಡುವುದು ಒಂದು ವೇಳೆ ಸುವಾರ್ತೆಯ ಕೂಟಕ್ಕಾಗಿ ಹಾಡಬೇಕು ಎಂದು ತಿಳಿದಿದ್ದರೆ, ಅದನ್ನು ಆ ಸಂದರ್ಭಕ್ಕೆ ನಿಯಮಿತಗೊಳಿಸಬೇಕು. ಅದನ್ನು ರೋಮಾ ಮತ್ತು ಇಬ್ರಿಯರಲ್ಲಿ ತಿಳಿಸಿರುವಂತ, ಪೌಲ ಮತ್ತು ಸೀಲರು ಇದನ್ನು ಫಿಲಿಪ್ಪಿಯ ಸೆರೆಮನೆಯಲ್ಲಿ ಚಟುವಟಿಕೆಯನ್ನಾಗಿ ಮಾಡಿಕೊಂಡರು "ಮಧ್ಯರಾತ್ರಿಯಲ್ಲಿ ಪೌಲನು ಸೀಲನು ಪ್ರಾರ್ಥನೆ ಮಾಡುವವರಾಗಿ ದೇವರಿಗೆ ಸ್ತುತಿ ಪದಗಳನ್ನು ಹಾಡುತ್ತಿದ್ದರು, ಸೆರೆಮನೆಯವರು ಲಕ್ಷ್ಯವಿಟ್ಟು ಕೇಳುತ್ತಿದ್ದರು" (ಅಪೊಸ್ತಲರಕೃತ್ಯಗಳು 16:25). ಆಗ ಆಕಸ್ಮಾತ್ತಾಗಿ ಮಹಾ ಭೂಕಂಪ ಉಂಟಾಯಿತು, ಸೆರೆಮನೆಯ ಅಸ್ತಿವಾರಗಳು ಕದಲಿದವು, ಎಲ್ಲರ ಬೇಡಿಗಳು ಕಳಚಿಬಿದ್ದವು, ಆಗ ಸೆರೆಯ ಯಜಮಾನನು, ಸ್ವಾಮಿಗಳೇ, ನಾನು ರಕ್ಷಣೆ ಹೊಂದುವದಕ್ಕೆ ಏನು ಮಾಡ ಬೇಕೆಂದು ಕೇಳಿದನು (ಅಪೊಸ್ತಲರಕೃತ್ಯಗಳು 16:30). ಅವರ ಹಾಡುಗಳನ್ನು ಕೇಳಿ, ಅವನು ನಿದ್ದೆ ಮಾಡಿ, ನಂತರ ಎದ್ದು ಈ ಪ್ರಶ್ನೆಯನ್ನು ಕೇಳಿದನು?

ಹಾಡುಗಳು, ಕ್ರೈಸ್ತರನ್ನು ಒಂದುಗೂಡಿಸುತ್ತದೆ. ಹಾಡುವದನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಪೌಲನು ಈ ನಿರ್ಣಯವನ್ನು ನೀಡಿದನು.

> ಆ ಸ್ಥಿರಚಿತ್ತವನ್ನೂ ಆದರಣೆಯನ್ನೂ ಕೊಡುವ ದೇವರು ನೀವು ಕ್ರಿಸ್ತ ಯೇಸುವನ್ನು ಅನುಸರಿಸಿ ಒಂದೇ ಮನಸ್ಸುಳ್ಳವರಾಗಿರುವಂತೆ ನಿಮಗೆ ದಯಪಾಲಿಸಲಿ. ಹೀಗೆ ನೀವು ಏಕಮನಸ್ಸಿನಿಂದ ಒಮ್ಮುಖವಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ತಂದೆಯಾದ ದೇವರನ್ನು ಕೊಂಡಾಡುವಿರಿ (ರೋಮಾಪುರ 15:5, 6).

ಹಾಡುವಾಗ ಪ್ರತಿಯೊಬ್ಬರೂ ಒಂದು ಚಟುವಟಿಕೆಯಲ್ಲಿ ತಲ್ಲೀನರಾಗಿರುತ್ತಾರೆ. ಹಾಡುವಂಥದ್ದನ್ನು ಎಲ್ಲರೂ ಒಪ್ಪುವಂಥವರಾಗಿರಬೇಕು, ಅದನ್ನು ಯಾವ ವೇಗದಲ್ಲಿ ಹಾಡು ತ್ತೇವೆ, ಎಂದು ತಿಳಿಯಬೇಕು. ಇಂಥಾ ಸಮೂಹದ ಗೀತೆಯಲ್ಲಿ, ಅವರೆಲ್ಲರ ಚಟುವಟಿಕೆಯು, ದೇವರನ್ನೇ ಮೆಚ್ಚಿಸಬೇಕು, ಮತ್ತು ದೇವರಿಗೆ ಒಟ್ಟಾಗಿ ಸ್ತುತಿಸಬೇಕು.

ಸ್ವರದ ಮೂಲಕ ದೇವರನ್ನು ಸ್ತುತಿಸುವುದು, ವಿವಿಧ ಆಯಾಮಗಳನ್ನು ಹೊಂದಿರುತ್ತದೆ. ಅದು ಆರಾಧನೆಗೆ, ದೇವರ ಒಂದು ಯೋಜನೆಯಾಗಿರುತ್ತದೆ ಅದನ್ನು ಪರಸ್ಪರರ ಉತ್ತೇಜ ನಕ್ಕಾಗಿ ದೇವರು ನೇಮಿಸಿರುವನು, ಅದು ಆತನ ಸ್ತುತಿಯನ್ನು ಸಾಗಿಸುವ ವಾಹನವಾ ಗಿದೆ. ಅನ್ಯರಿಗೆ ವಾಕ್ಯವನ್ನು ಸಾರುವ ಮೂಲವಾಗಿದೆ, ಹೆಚ್ಚಿನ ಪರಿಣಾಮಕ್ಕಾಗಿ ಜನರನ್ನು ಒಗ್ಗೂಡಿಸುತ್ತದೆ.

ಒಂದು ವೇಳೆ ಅದು ಅನಗತ್ಯ ಎಂದು ತಿಳಿದರೆ, ಅದು ಹೊಸ ಒಡಂಬಡಿಕೆಯಲ್ಲಿನ ಚರ್ಚೆಗೆ ಗ್ರಾಸವಾಗಿರುತ್ತದೆ, ನಮ್ಮದೇ ಆದಂಥ ಅರ್ಥ ನೀಡುವ ಪದಗಳನ್ನು ಬಳಸಬಾರದು, ನಾವು ನೋಡುವದಕ್ಕೆ ಇಷ್ಟ ಪಡುವಂಥ ಬರವಣಿಗೆಯೂ ಆಗಿರಬಾರದು. ಸಮಯಕ್ಕನುಗುಣವಾಗಿ, ಪದಗಳ ಅರ್ಥವು ಬದಲಾಗುತ್ತದೆ, ಅದು ದಾಖಲಾದಾಗ ಅದರ ಅರ್ಥವನ್ನು ತಿಳಿಯಬೇಕು. ಆದುದರಿಂದ, ಬೈಬಲಿನ ದೀಕ್ಷಾಸ್ನಾನದ ಕುರಿತು ಉಪದೇಶಗಳ ಮೇಲೆ ಚಿಮುಕಿಸುವದನ್ನಾಗಲೀ, ಹೂಯ್ಯುವದನ್ನಾಗಲಿ ಮಾಡಬಾರದು, ಯಾಕೆಂದರೆ ಹೊಸ ಒಡಂಬಡಿಕೆಯ ಸಮಯದಲ್ಲಿ ಮಾತ್ರ ಆ ಅರ್ಥವನ್ನು ನೀಡುತ್ತಿತ್ತು.

ನಾವು ಯಾವುದನ್ನಾದರು ಅರ್ಥಮಾಡಿಕೊಳ್ಳದೆ ಇರುವಾಗ ಅಥವಾ ಇತರರ ಮಾತಿನಲ್ಲಿ ತಪ್ಪನ್ನು ಹುಡುಕುವಾಗ (ಅಥವಾ ಬರವಣಿಗೆ) ಅದರ ಅರ್ಥವೇನು? ಎಂದು ಸ್ಪಷ್ಟತೆಯನ್ನು ತಿಳಿಯಬಯಸುತ್ತೇವೆ, ದೇವರೊಂದಿಗಿನ ಸಂಬಂಧದಲ್ಲಿ ಯಾವ ಅರ್ಥವನ್ನು ನೀಡುತ್ತದೆ ಎಂದು ಕೇಳುತ್ತೇವೆ, ನಾವು ಆತನನ್ನು ಅರಿಯುವದಕ್ಕಾಗಿ, ಪ್ರಶ್ನೆ ಕೇಳುವುದು ಅಗತ್ಯವಾ ಗಿದೆ (ಎಫೆಸ 5:15-17). ಆರಾಧನೆಯಲ್ಲ ಉಪಯೋಗಿಸುವ ವಾದ್ಯಗಳ ಕುರಿತು, ದೇವರು "ಹಾಡು" ಎಂಬ ಪದವನ್ನು ನಿರ್ದಿಷ್ಟವಾಗಿ ಉಪಯೋಗಿಸಿರುವನು. ಮೂಲದಲ್ಲಿ ಮೂರು ಪದಗಳಿವೆ. ಅವೆಲ್ಲವು "ಹಾಡು" ಎಂಬ ಅರ್ಥವನ್ನೇ ನೀಡುತ್ತದೆ.

ಮೊದಲನೆಯದು *ado* (ಎಂಬಪದದಿಂದ ಬಂದಿರುತ್ತದೆ) ಹಾಡುವುದು ಎಂದು ಒಂದು ಮೂಲ ತಿಳಿಸುತ್ತದೆ,[5] "ಜಪ" ಮಾಡು ಎಂಬುದಾಗಿ ಇನ್ನೊಂದು ಮೂಲವು ಸರಳವಾಗಿ "ಹಾಡು"[6] ಎಂದು ತಿಳಿಸುತ್ತದೆ.

ಎರಡನೆಯ ಪದ *humneo* (ಎಂಬ ಪದದಿಂದ) ಜೋಸೆಪ್ ತಯಾರ್ ಇದನ್ನು ಸ್ತುತಿಯನ್ನು ಹಾಡುವದಕ್ಕೆ, ಕೀರ್ತನೆಯನ್ನು ಹಾಡುವದಕ್ಕೆ" ಹಾಡುವದಕ್ಕೆ ಎಂದಿದ್ದಾರೆ.[7] ವಿಲಿಯಮ್ ಆರ್ ನಟ್ ಮತ್ತು ವಿಲ್‌ಬಾರ್ ಗಿಲಗ್ರಿಚ್‌ರವರು ಇದನ್ನು "ಸ್ತುತಿಯ ಹಾಡು" ಸ್ತುತಿ ಕೀರ್ತನೆ ಹಾಡು - ಒಬ್ಬನಿಗೆ "ಹಾಡು" (ಕೀರ್ತನೆ)."[8]

ಮೂರನೆಯ ಪದ *psalmos* ("ಕೀರ್ತನೆ ಪದ") ಈ ಪದವು ಹೇಗೂ ಹೆಚ್ಚಿನದಾಗಿದ್ದು ಮತ್ತು ಅಭಿವದ್ಧಿಯ ಪಥವನ್ನು ತೋರಿಸುತ್ತದೆ. ಥೈಯರ ಇದನ್ನು ಮೂಲತಃವಾಗಿ ಎಳೆದು ಹಾಕು, ಹೊರಗೆಳೆ (ಕೂದಲನ್ನು ಕೀಳುವ ರೀತಿಯಲ್ಲಿ) ನಂತರ, ಇದು "ಸ್ಪರ್ಶಿಸಿ ನಡಗುವಂತೆ ಮಾಡು, ಝೆಂಕಾರ ಮಾಡು" ಹಾಗು "ತಂತಿವಾದ್ಯಗಳಲ್ಲಿ ಬಾರಿಸು, ವೀಣೆಯನ್ನು ಬಾರಿಸು ನಂತರ ಥೈಯರ ಇದನ್ನು ಹೊಸ ಒಡಂಬಡಿಕೆಯಲ್ಲಿನ ಅರ್ಥದಂತೆ "ಗೀತೆಯನ್ನು ಹಾಡು ಸ್ತುತಿಯ ಹಾಡಿನಿಂದ ಆಚರಣೆ ಮಾಡು"[9] ಹೇಗೂ, ಅರನಟ್ ಮತ್ತು ಗ್ರಿಂಗಿಬ್ ಈ ಪದವನ್ನು ವಿವರಿಸಿ (ಹಳೆ ಒಡಂಬಡಿಕೆ) ಸಂಬಂಧದಲ್ಲಿ ಹಾಡು (ವೀಣೆಯ ಸ್ವರಕ್ಕೆನುಗುಣ ವಾಗಿ), ಸ್ತುತಿಯನ್ನು ಯಾರಿಗೆ ಸಲ್ಲಿಸಬೇಕೋ ಆತನಿಗೆ ಹಾಡು"[10] ಹೊಸ ಒಡಂಬಡಿಕೆಯಲ್ಲಿ ವಾದ್ಯಗಳ ಜೊತೆಯಲ್ಲಿ ಹಾಡುವಂತದ್ದನ್ನು "ನಿಮ್ಮ ಹೃದಯದಲ್ಲಿ"[11] ಎಂದು ತಿಳಿಸಲಾಗಿದೆ (ಎಫೆಸ 5:19).

ಈ ಕಡೆಯ ಪದದಲ್ಲಿ ಒಂದು ಗೊಂದಲವು ಸೃಷ್ಟಿಯಾಗಿದೆ. ಕ್ರಿಯಾಪದದಲ್ಲಿ *psallo* ಇದರಲ್ಲಿ ತಾಂತ್ರಿಕತೆಯುಳ್ಳ ವಾದ್ಯಗಳನ್ನು ಸಭೆಯ ಆರಾಧನೆಯಲ್ಲಿ ಅನುಮತಿಸಲಾಗಿದೆ. ಯಾಕಂದರೆ ಈ ಪದದಲ್ಲಿ ವಾದ್ಯಗಳೆಂಬುದನ್ನು ದಾಖಲಿಸಲಾಗಿದೆ.[12] ಈ ಚರ್ಚೆಯಲ್ಲಿ ಮೂರು ಬಲಹೀನತೆಗಳಿವೆ. (1) ಈ ಪದದರ್ಥ ಅಭಿವೃದ್ಧಿಗೊಂಡಿದೆ. ಇದರಲ್ಲಿರುವ ಅರ್ಥವು ಕೀಳು ಅಥವಾ "ಕೂದಲನ್ನು ಹೊರಗೆಳೆ" ಈ ಅರ್ಥವನ್ನು ಆರಾಧನೆಯಲ್ಲಿ ಅಳವಡಿಸಬೇಕೆಂದು ಯಾರು ವಾದಿಸುವದಿಲ್ಲ, ಯಾಕಂದರೆ ಹೊಸ ಒಡಂಬಡಿಕೆಯ ಬರಹಗಾರರು ಈ ಪದವನ್ನು ಉಪಯೋಗಿಸುವದಕ್ಕೆ ಮುಂಚಿನ ಅರ್ಥವಾಗಿರುತ್ತದೆ.[13] ನಾವು ಇಲ್ಲಿ "ಹೆಚ್ಚಿನ ಆಯ್ಕೆಯನ್ನು" ಮಾಡದೆ ಅದರರ್ಥವನ್ನು ನೀಡಬಾರದು. (2) ಆದಿ ಸಭೆಯಲ್ಲಿ ತಾಂತ್ರಿಕವಾದ ವಾದ್ಯಗಳನ್ನು ಅಳವಡಿಸಿಕೊಳ್ಳದೇ, ಹಾಡುವದು ಎಂಬುದಾಗಿ ಆದಿ ಕ್ರೈಸ್ತರು ತಿಳುಕೊಂಡಿದ್ದರು, ಆದುದರಿಂದ ಸಭೆಯವರು ಕಾಪೆಲ್ಲಾವನ್ನು ಹಾಡಿದರು.[14] ಅದು ಹಲವಾರು ಶತಮಾನಗಲ್ಲಿ ಮುಂದುವರೆ ಯಿತು.[15] (3) ಯಾವ ವಾದ್ಯವನ್ನು ಉಪಯೋಗಿಸಬೇಕೆಂದು ಬೈಬಲ್ ತಿಳಿಸುತ್ತದೆ: (ಎಫೆಸ 5:19)ರ ಪ್ರಕಾರ ಅದು ಒಬ್ಬನ ಹೃದಯವೇ ಆಗಿರುತ್ತದೆ. ಆದಿ ಸಭೆಯವರು ಈ ಅರ್ಥವನ್ನು ತಿಳಿದಿದ್ದರು.

ಭಾಷಾ ಶಾಸ್ತ್ರದ ಪ್ರಕಾರ ವಾದ್ಯವಿಲ್ಲದೆ ಹಾಡುವ ಸೂಚನೆಯನ್ನು ನೀಡಿ ಗ್ರೀಕ್ ಭಾಷೆಯ ಪದದಲ್ಲಿ ವಾದ್ಯರಹಿತ ಎಂಬುದಾಗಿರುತ್ತದೆ, ಈಗ ಹೊಸ ಒಡಂಬಡಿಕೆಯ ಬರಹಗಾರರು ಆರಾಧನೆಗೆ ಸಲಹೆಯನ್ನು ನೀಡುವದಕ್ಕಾಗಿ ಈ ಪದವನ್ನು ಉಪಯೋಗಿಸಲಿಲ್ಲ.[16] ಈ

ಸಲಹೆಗಳನ್ನು ಮೀರುವಂತದ್ದು ಎಚ್ಚರಿಕೆಗೆ ಕಾರಣವಾಗುತ್ತದೆ.

(1) ಹಾಡುವದು ಸಭೆಯ ಆರಾಧನೆಯಲ್ಲಿ ಒಂದು ಭಾಗವಾಗಿರುತ್ತದೆಂಬ ಸೂಚನೆಯನ್ನು ನೀಡಿ, ಇದು ಸ್ತುತಿಗೂ ಮತ್ತು ಸೇವೆಗೂ ಅನುಕೂಲವಾಗಿರುತ್ತದೆ, ಮತ್ತು (2) ಹೊಸ ಒಡಂಬಡಿಕೆಯ ಪದ ಸಂಗ್ರಹದಲ್ಲಿ ಕೇವಲ "ಹಾಡು" ಎಂಬುದಾಗಿದೆ (ಯಾಂತ್ರಿಕ ವಾದ್ಯಗಳಿಲ್ಲದೆ ಎಂಬ ಸಲಹೆಯಿರುವದಿಲ್ಲ). ಆರಾಧನೆಗೆ ಹಾಡುವಂತದ್ದನ್ನು ಒಪ್ಪಿಕೊಳ್ಳುವ ಸೂಚನೆಯಾಗಿರುತ್ತದೆ. ಆದುದರಿಂದ ಇದರ ಕುರಿತು ಚರ್ಚೆಯಾಗಲಿ ಅಥವಾ ಪ್ರಶ್ನೆಯಾಗಲಿ ಇರಬಾರದು.

*ಹೊಸ ಒಡಂಬಡಿಕೆಯ ಆರಾಧನೆಯಲ್ಲಿ ವಾದ್ಯಗಳನ್ನು ಉಪಯೋಗಿಸುವ ಕುರಿತು ಇರುವ ಪ್ರಶ್ನೆಗಳನ್ನು ಮತ್ತು ಸಮಸ್ಯೆಗಳ ಕುರಿತು ಗಮನಿಸೋಣ.* ಸಭೆಯಲ್ಲಿ ಹಾಡುವದನ್ನು ಅಧಿಕೃತಗೊಳಸಲಾಗಿದೆ. ಮತ್ತು ದೇವರಿಗೆ ತೋರಿಸುವ ಭಾವನೆಯೂ ಆಗಿರುತ್ತದೆ. ಹಾಡುಗಳ ಜೊತೆಯಲ್ಲಿ ವಾದ್ಯಗಳ ಅಗತ್ಯತೆಯಿದೆಯೇ ಎಂದು ತಿಳಿಯಬೇಕು.

ಹಳೆ ಒಡಂಬಡಿಕೆಯಲ್ಲಿ ವಾದ್ಯಗಳನ್ನು ಉಪಯೋಗಿಸಿರುವದರಿಂದ ನಾವು ಸಹ ಅದನ್ನು ಉಪಯೋಗಿಸಬಹುದೆಂಬ ತರ್ಕವಿದೆ. ಕೀರ್ತನೆ 150ರಲ್ಲಿ ಇಂತಹ ಒಂದು ಅಧಿಕಾರವನ್ನು ನೋಡುತ್ತೇವೆ, ಅಲ್ಲಿ ಕೀರ್ತನೆಗಾರನು ಈ ರೀತಿ ಹೇಳಿದ್ದಾನೆ,

> ಕೊಂಬುದುತ್ತಾ ಆತನನ್ನು ಸ್ತುತಿಸಿರಿ;
> ಸ್ವರಮಂಡಲಕಿನ್ನರಿಗಳಿಂದ ಆತನನ್ನು ಸ್ತುತಿಸಿರಿ.
> ದಮ್ಮಡಿಬಡಿಯುತ್ತಾ ಕುಣಿಯುತ್ತಾ
> ಆತನನ್ನು ಸ್ತುತಿಸಿರಿ;
> ತಂತೀವಾದ್ಯಗಳಿಂದಲೂ ಕೊಳಲುಗಳಿಂದಲೂ
> ಆತನನ್ನು ಸ್ತುತಿಸಿರಿ.
> ತಾಳದಿಂದ ಆತನನ್ನು ಸ್ತುತಿಸಿರಿ;
> ಝುಲ್ಲರಿಯಿಂದ ಆತನನ್ನು ಸ್ತುತಿಸಿರಿ.
> ಶ್ವಾಸವಿರುವದೆಲ್ಲವೂ ಯೆಹೋವನನ್ನು ಸ್ತುತಿಸಲಿ;
> ಯಾಹುವಿಗೆ ಸ್ತೋತ್ರ!

ದಾವೀದನು ದೇವಾಲಯದ ಕಟ್ಟಡಕ್ಕಾಗಿಯೂ ಮತ್ತು ಆರಾಧನೆಗಾಗಿಯೂ ಸಿದ್ಧನಾಗುವಾಗ ಈ ಆಚರಣೆಗಳಲ್ಲಿ ವಾದ್ಯಗಳನ್ನು ಉಪಯೋಗಿಸಬೇಕೆಂಬ ಸಲಹೆಯನ್ನು ನೀಡಿದ್ದಾನೆ: "ಆಗ ದಾವೀದನು ಲೇವಿಯರ ಪ್ರಧಾನರಿಗೆ ಗಾಯಕರಾದ ನಿಮ್ಮ ಸಹೋದರರನ್ನು ಸ್ವರಮಂಡಲ ಕಿನ್ನರಿ ತಾಳ ಮೊದಲಾದ ವಾದ್ಯಗಳಿಂದ ಉತ್ಸಾಹ ಧ್ವನಿಮಾಡುವದಕ್ಕಾಗಿ ನೇಮಿಸಿರಿ ಎಂದು ಆಜ್ಞಾಪಿಸಲು" (1 ಪೂರ್ವಕಾಲ ವೃತ್ತಾಂತ 15:16).[17] ಹೇಗೂ, ದಾವೀದನು, ತನ್ನ ಸ್ವಂತ ವಿಚಾರದಂತೆ ಮಾಡದೇ ದೇವರ ಅಪ್ಪಣೆಯ ಮೇರೆಗೆ ಅದನ್ನು ಕಾರ್ಯಸ್ಥಿತಿಗೆ ತಂದನು. ಯೆಹೆಜ್ಕೇಲನು ಸಹ ದೇವಾಲಯದ ಕ್ರಮ ಬದ್ಧ ಆರಾಧನೆಯನ್ನು ನೇಮಿಸಿದ್ದನು:

> ಇದಲ್ಲದೆ ಅವನು ತಾಳ ಸ್ವರಮಂಡಲ ಕಿನ್ನರಿ ಇವುಗಳಿಂದ ಭಜಿಸುವದಕ್ಕೋಸ್ಕರ ಲೇವಿಯರನ್ನು ದಾವೀದ ರಾಜದರ್ಶಿಯಾದ ಗಾದ್, ಪ್ರವಾದಿಯಾದ ನಾತಾನ್ ಇವರ ಆಜ್ಞಾನುಸಾರವಾಗಿ ಯೆಹೋವನ ಆಲಯದಲ್ಲಿ ಇರಿಸಿದನು. ಯೆಹೋವನು ತಾನೇ ಪ್ರವಾದಿಗಳ ಮುಖಾಂತರ ಹೀಗೆ ಆಜ್ಞಾಪಿಸಿದ್ದನು. ಆ ಲೇವಿಯರು ದಾವೀದನ ವಾದ್ಯಗಳನ್ನೂ ಯಾಜಕರು ತುತೂರಿಗಳನ್ನೂ ಹಿಡಿದು ನಿಂತಿರಲು ಹಿಜ್ಕೀಯನು ಯಜ್ಞವೇದಿಯ ಮೇಲೆ ಸರ್ವಾಂಗಹೋಮವನ್ನು ಸಮರ್ಪಿಸುವದಕ್ಕೆ ಆಜ್ಞಾಪಿಸಿದ್ದನು (2 ಪೂರ್ವಕಾಲವೃತ್ತಾಂತ 29:25, 26).

ಆದುದರಿಂದ, ಹಳೇ ಒಡಂಬಡಿಕೆ ಕಾಲದಲ್ಲಿ ಮಾತ್ರ ಆರಾಧನೆಯ ಕೂಟದಲ್ಲಿ ವಾದ್ಯಗಳನ್ನು ಉಪಯೋಗಿಸಬೇಕೆಂಬ ಸಲಹೆಯಿತ್ತು. ಆದುದರಿಂದ ಇದು ಆಶ್ಚರ್ಯವಾಗಿದೆ.

ಈ ಹಿನ್ನಲೆಯಿಂದ, ಹೊಸ ಒಡಂಬಡಿಕೆಯ ಆರಾಧನೆಯಲ್ಲಿ ಎಫೆಸದವರಿಗೆ ಹಾಡನ್ನು ಹಾಡಿರಿ ಎಂಬುದಾಗಿ ತಿಳಿಸಿದಂತೆ, ವಾದ್ಯಗಳನ್ನು ಉಪಯೋಗಿಸಬಹುದೆಂದು ವಾದಿಸುತ್ತಾರೆ. ಅಂತಹ ವಾದ್ಯಗಳ ಮೂಲಕವಾಗಿ ಎಂದರೆ ಕಹಳೆ, ವೀಣೆ, ಮತ್ತು ಕೊಳಲುಗಳನ್ನು ಆರಾಧನೆಯಲ್ಲಿ ಉಪಯೋಗಿಸಬಹುದೆಂದು ಅಧಿಕೃತ ಮಾಡಲಾಗಿದೆ (ಕೀರ್ತನೆ 150).

ಮೊದಲನೆಯ ಶತಮಾನದ ಪ್ರಪಂಚದಲ್ಲಿ ಹಳೆ ಒಡಂಬಡಿಕೆಯ ಕೀರ್ತನೆಗಳನ್ನು ಉಪಯೋಗಿಸುತ್ತಿದ್ದರೆಂಬ ನಂಬಿಕೆಯುಂಟಾಗಿತ್ತು. ಆದಾಗ್ಯೂ ಜನರು ಸಭೆಗೆ ಬರುವಾಗ "ಕೀರ್ತನೆಯೊಡನೆ" ಬರುತ್ತಿದ್ದರು. ಅಂತಹ ಒಂದು ಕೀರ್ತನೆಯು ಹೊಸ ಸೃಷ್ಟಿಯು ಪ್ರಕಟನೆಯನ್ನು ನೀಡುವದಿತ್ತು ಎಂದು ಪೌಲನು ತಿಳಿಸಿದ್ದಾನೆ (1 ಕೊರಿಂಥ 14:26).[18]

ಈ ಚರ್ಚೆಯಲ್ಲಿ ಆರಾಧನೆಗೆ ಕೀರ್ತನೆಯ ಪುಸ್ತಕವನ್ನು ಉಪಯೋಗಿಸಲು ಅಧಿಕೃತವಾದದ್ದು ಎಂಬ ಸೂಚನೆಯಿರುತ್ತದೆ, ಹಾಗಾದರೆ ಯಜ್ಞ ಮತ್ತು ಹೋಮ ಕುರಿತಾಗಿ ಏನು? ಕೀರ್ತನೆ 66:13-15ನ್ನು ಓದಿರಿ (ಮತ್ತೆ ನೋಡಿರಿ 50:14; 54:6; 107:22; 116:17).[19]

ಹಳೆ ಒಡಂಬಡಿಕೆಯಲ್ಲಿ ನೀಡಲಾಗಿರುವ ಆರಾಧನೆ ಪದ್ಧತಿಗಳನ್ನು ಹೊಸ ಒಡಂಬಡಿಕೆಗೆ ಸಂಪೂರ್ಣವಾದ ಆಧಾರವೆಂದು ತಿಳಿದು ಉಪಯೋಗಿಸಬಾರದೆಂದು ಅನೇಕ ಕ್ರೈಸ್ತರು ತಿಳಿದಿದ್ದಾರೆ. ಇಬ್ರಿಯ ಗ್ರಂಥ ಕರ್ತನು ಒಂದು ಅಂಶವನ್ನು ಸ್ಪಷ್ಟಪಡಿಸಿ, ಹಳೆ ಒಡಂಬಡಿಕೆಯ ಬದಲಾಗಿ ಹೊಸದನ್ನು ಅಳವಡಿಸಲಾಗಿದೆ (ಅಧ್ಯಾಯಗಳು 7-10). ಕೊನೆಯದಾಗಿ, ಅವನು ಜನರಿಗೆ ಮನವಿ ಮಾಡಿ ಹೊಸ ಒಡಂಬಡಿಕೆ ಕ್ರೈಸ್ತರು ಕರ್ತನಾದ ಯೇಸುವನ್ನು ಬಿಟ್ಟು ಬಿಡದೇ ಮೋಶೆಯ ನಿಯಮದಲ್ಲಿರುವ ಹಳೆಯ ಮಾರ್ಗವನ್ನು ತ್ಯಜಿಸುವಂತೆ ತಿಳಿಸಿದ್ದಾನೆ.

ಗಲಾತ್ಯದಲ್ಲಿಯೂ ಇದೇ ರೀತಿಯಾಗಿ ಹೇಳಲಾಗಿದೆ, ಆದರೆ ಕೆಲವು ನಿರ್ದಿಷ್ಟವಾದ ವ್ಯತ್ಯಾಸಗಳಿವೆ. ಇಬ್ರಿಯ ಪತ್ರಿಕೆಯಲ್ಲಿ ಕ್ರೈಸ್ತರು ಯೇಸುವನ್ನು ಬಿಟ್ಟು ಮೋಶೆಯ ನಿಯಮಗಳಿಗೆ ಒಳಗಾಗುತ್ತಿದ್ದರು ಗಲಾತ್ಯದವರ ಸಮಸ್ಯೆಯಲ್ಲಿ ಮೋಶೆಯ ಮತ್ತು ಕ್ರೈಸ್ತತ್ವದ ನಿಯಮಗಳು ಬೆರೆತುಕೊಂಡಿದ್ದವು. ಈ ಎರಡನ್ನು ಮಾಡುವವರು ಅವರನ್ನು ಕರೆದಾತನನ್ನು ಬಿಟ್ಟುಬಿಟ್ಟಿದ್ದರು (1:6). ಈ ರೀತಿಯಾಗಿ ಬಿಟ್ಟು ಹೋದವರು ಮತ್ತೊಂದು ಸುವಾರ್ತೆಯನ್ನು ಸಾರಿದ್ದರಿಂದ ಅವರು "ಶಾಪಕ್ಕೆ" ಒಳಗಾದರು (1:8, 9).

ಹಳೆ ಒಡಂಬಡಿಕೆಯ ನಿಯಮಗಳನ್ನು ಕ್ರೈಸ್ತತ್ವಕ್ಕೆ ಅಳವಡಿಸಿದವರ ವಿರುದ್ಧವಾಗಿ ಹೊಸ ಒಡಂಬಡಿಕೆಯ ಬರಹಗಾರರು ಮಾತನಾಡಿದ್ದಾರೆ ನಾವುಗಳು ಸಹ ಅದೇ ತಪ್ಪನ್ನು ಮಾಡಬಾರದು.

ಎರಡನೆಯದಾಗಿ, ವಾದ್ಯಗಳನ್ನು ಉಪಯೋಗಿಸುವಂತ ನಿಯಮವು ಹೊಸ - ಒಡಂಬಡಿಕೆಯಲ್ಲಿರುವದೆಂಬುದಕ್ಕೆ ಪ್ರಕಟನೆಯ ಪುಸ್ತಕದ ಮೂಲವನ್ನು ವ್ಯಾಖ್ಯಾನಿಸಿದ್ದಾರೆ. ಅದರಲ್ಲಿ ಕಹಳೆ (4:1; 8:6-12) ಮತ್ತು (ವೀಣೆ 5:8; 14:2). ಅದೇ ರೀತಿಯಾಗಿ ಧೂಪದ ಕುರಿತಾಗಿ ವಾಕ್ಯಗಳಿವೆ (5:8).

ಪರಲೋಕದಲ್ಲಿರುವಂತ ಸಂಗತಿಗಳನ್ನು ನಮ್ಮ ಸಭೆಯ ಆರಾಧನೆಗಳಿಗೆ ಅಳವಡಿಸಿಕೊಳ್ಳಬೇಕೆಂಬ ಅಪ್ಪಣೆಯಿರುವದಿಲ್ಲ, ಒಬ್ಬ ಬರಹಗಾರನು ಇನ್ನೊಂದು ಸಮಸ್ಯೆಯ ಒಂದಂಶವನ್ನು ತಿಳಿಸಿದ್ದಾನೆ:

> ವಿಶೇಷವಾಗಿ ಸಂಗೀತಗಾರರಿಗೆ ಸರಿಕಾಣಿಸುವದಿಲ್ಲ ಹೇಗೂ ಅಲ್ಲಿ ಬರವಣಿಗೆಯ ಸಮಸ್ಯೆಯಿದೆ. ಯೋಹಾನನು "ಸೂಚನೆಯಾಗಿ" ತಿಳಿದಿದ್ದನು (ಪ್ರಕಟನೆ 1:1).[20] - ಅಂದರೆ ಸಂಕೇತವಾಗಿ ನೋಡಿದ್ದನು. ಅವನು ಎಲ್ಲಿ ವೀಣೆಯನ್ನು ನೋಡಿದ್ದನೋ (ಪ್ರಕಟನೆ 5), ಸಿಂಹವನ್ನು ನೋಡುವ ವಾಗ್ದಾನವನ್ನು ಮಾಡಿದ್ದನು (5:5). ಆ

> “ಸಿಂಹವು” ಕಾಣಿಸಿಕೊಂಡಾಗ ಅದು ಸಿಂಹವಾಗಿರದೇ ಕುರಿಮರಿಯಾಗಿತ್ತು (ವಚನ 6), ಆದರೆ ಅದು ಕುರಿಮರಿಯಾಗಿರದೇ ಅಥವಾ ಯೇಸುವು ಆಗಿರಲಿಲ್ಲ (ವಚನ 9). ಈಗ ಯೋಹಾನನ ಕಂಡ ಸಿಂಹವು ನಿಜವಾದ ಸಿಂಹವಾಗಿರಲಿಲ್ಲ, ಮತ್ತು ಕುರಿಮರಿಯು ನಿಜವಾದ ಕುರಿಮರಿಯಾಗಿರಲಿಲ್ಲ, ಇದರಲ್ಲಿ ಯಾವ ವಾದವಿದೆ - ಅಥವಾ ಬುದ್ಧಿಯಿಂದ ನಿರ್ಣಯಿಸಬಹುದು - ವೀಣೆಯು ನಿಜವಾದ ವೀಣೆಯೇ? ಇದೆಲ್ಲವೂ ಪರಲೋಕದಲ್ಲಿ ನಡೆದಂತ ಸಂಗತಿಯಾಗಿತ್ತು “ರಕ್ತ ಮಾಂಸವು” ಪರಲೋಕವನ್ನು ಪ್ರವೇಶಿಸಲು ಸಾಧ್ಯವಿಲ್ಲ (1 ಕೊರಿಂಥ 15:50), ಇದರಿಂದ ನಾವು ಅವುಗಳು ವೀಣೆ ಮತ್ತು ಧೂಪ ಎಂಬುದಾಗಿ ಅಕ್ಷರಶಃ ಗ್ರಹಿಸಬಹುದೇ?[21]

ಹಳೇ ಒಡಂಬಡಿಕೆಯಲ್ಲಿ ವಾದ್ಯಗಳನ್ನು ಉಪಯೋಗಿಸಬೇಕೆಂಬ ವಾಕ್ಯಗಳು ಮತ್ತು ಅಪ್ಪಣೆಗಳು ಇರುವದರಿಂದ, ಹಾಗು ಪ್ರಕಟಣೆಯಲ್ಲಿಯೂ ಇದರ ಕುರಿತು ವಾಕ್ಯಗಳಿರುವದರಿಂದ, ಭೂಲೋಕದ ಆರಾಧನೆಯಲ್ಲಿ ವಾದ್ಯಗಳ ಉಪಯೋಗದ ಕುರಿತು ಹೊಸ ಒಡಂಬಡಿಕೆಯು ಮೌನವಾಗಿರುತ್ತದೆ. ದೇವರು ತನ್ನ ಮಾತಿನ ಸಂಪರ್ಕದಲ್ಲಿ ಈ ಪದಗಳನ್ನು ಉಪಯೋಗಿಸಿದ್ದಾನೆ (1 ಕೊರಿಂಥ 2:11-13), ಇದರಲ್ಲಿ ಯಾಂತ್ರಿಕವಾದ ಅಕ್ಷರಶಃ ವಾದ್ಯಗಳು ಒಳಗೊಂಡಿರುವದಿಲ್ಲ. ಅದರ ಅರ್ಥಗಳನ್ನು ತಪ್ಪಾಗಿ ಯೋಚಿಸುವದು ಗ್ರಂಥಗಳ ತಪ್ಪಾದ ಅನುವಾದವಾಗಿರುತ್ತದೆ.

ಮೂರನೆಯದಾಗಿ, ಸಭೆಯ ಆರಾಧನೆಯಲ್ಲಿ ವಾದ್ಯಗಳ ಉಪಯೋಗದ ಕುರಿತು ಪೌಲನು ಬೋಧನೆ ನೀಡರುತ್ತಾನೆ 1 ಕೊರಿಂಥ 14:7, 8:

> ಜೀವವಿಲ್ಲದ ವೀಣೆ ಅಥವಾ ಕೊಳಲುಗಳು ಒಂದು ಶಬ್ದವನ್ನುಂಟು ಮಾಡಿ ಸ್ವರದಲ್ಲಿ ವ್ಯತ್ಯಾಸವನ್ನು ತೋರದಿದ್ದರೆ ಕೊಳಲಾಗಲಿ ಅಥವಾ ವೀಣೆಯಾಗಲಿ ಅವರ ಸ್ವರವನ್ನು ತಿಳಿಯುವದು ಹೇಗೆ? ಎಚ್ಚರ ನೀಡುವಂತ ಗಂಟೆಯು ತಪ್ಪಾದ ಸ್ವರವನ್ನು ಹೊರಡಿಸಿದರೆ ಒಬ್ಬನು ಹೇಗೆ ರಣರಂಗಕ್ಕೆ ಹೋಗಲು ಸಾಧ್ಯ?

ಆರಾಧನೆಯಲ್ಲಿ ವಾದ್ಯಗಳನ್ನು ಉಪಯೋಗಿಸುವದು ನಿಷೇದವೆಂದು ಪೌಲನು ವಾಕ್ಯಗಳನ್ನು ನೀಡಿದ್ದಾನೆ. ಈ ದೃಷ್ಟಾಂತಗಳು ಸಭೆಯಲ್ಲಿ ನಡೆಯುವ ಚಟುವಟಿಕೆಗಳು ಜ್ಞಾನಯುಕ್ತವಾಗಿರಬೇಕೆಂದು ತೋರಿಸುತ್ತದೆ. ಅರ್ಥವನ್ನು ನೀಡದ ನಾಲಿಗೆಯು ವ್ಯರ್ಥ ಅದೇ ರೀತಿಯಲ್ಲಿ ನೀಟಾದ ಸ್ವರವಿಲ್ಲದ ಅಥವಾ ಸ್ಪಷ್ಟವಾದ “ಸಂದೇಶವನ್ನು” ನೀಡದ ರಣರಂಗದ ಕಹಳೆಯು ವ್ಯರ್ಥ.

ವಾದ್ಯಗಳಲ್ಲಿ “ಜೀವವಿಲ್ಲ” ಎಂದು ಪೌಲನು ವಿವರಿಸಿದ್ದಾನೆ (1 ಕೊರಿಂಥ 14:7). ದೇವರನ್ನು ಸ್ತುತಿಸುವದಕ್ಕೆ ಅವುಗಳು ಒಪ್ಪದವುಗಳಾಗಿದ್ದವೇ? ಅದನ್ನು ಅವನು ತೀವ್ರವಾಗಿ ಹೇಳದೇ, ದೇವಾಲಯದ ಆರಾಧನೆಯಲ್ಲಿ ಯಾಂತ್ರಿಕವಾದ ವಾದ್ಯಗಳನ್ನು ಉಪಯೋಗಿಸ ಬಾರದೆಂಬ ತತ್ವವಿರುತ್ತದೆ.[22] - ಹೊಸ ಒಡಂಬಡಿಕೆ ಸಭೆಗಳಲ್ಲಿ ಇದರ ಕುರಿತಾದ ಯಾವ ವಿಧವಾದ ಸಲಹೆಯನ್ನು ಪೌಲನು ನೀಡಿರುವದಿಲ್ಲ.

ಆದಿ ಕ್ರೈಸ್ತರು ಹಾಡುವಾಗ ವಾದ್ಯಗಳನ್ನು ಉಪಯೋಗಿಸಿರುವದಿಲ್ಲ. ಆರಾಧನೆಯಲ್ಲಿ ಹಾಡುಗಳ ಜೊತೆಯಲ್ಲಿ ವಾದ್ಯಗಳನ್ನು ಉಪಯೋಗಿಸಬೇಕು ಎಂಬ ವ್ಯಾಖ್ಯಾನವು ವಾಕ್ಯದಲ್ಲಿ ಇರಲಿಲ್ಲ ಎಂಬುದನ್ನು ಅರಿತಿದ್ದರು. ಹೇಗೂ ಅವರು ಸ್ಥಾಪಿಸಿದ ಸಭೆಗಳಲ್ಲಿ ಇವುಗಳ ಪರಿಚಯವೂ ಇರಲಿಲ್ಲ - ಆದರೂ ಆ ವಿಷಯವೂ ಚರ್ಚೆಗೆ ಗ್ರಾಸವಾಗಿತ್ತು. ಕ್ರಿ.ಶ. ಏಳನೇ ಶತಮಾನದಲ್ಲಿ, ಆರಾಧನೆಯಲ್ಲಿ ವಾದ್ಯಗಳ ಪರಿಚಯವಾಯಿತು. ಹಾಗೆಯೇ ಎರಡನೇ ಮಿಲೇನಿಯಮ್ಮಿಗೆ ಅದು ಮುಂದುವರಿಯಿತು.[23]

ಆರಾಧನೆಯಲ್ಲಿ, ಯಾಂತ್ರಿಕವಾದ ವಾದ್ಯಗಳನ್ನು ಉಪಯೋಗಿಸುವ ಕುರಿತು, ಮೂರು ಹೇಳಿಕೆಗಳನ್ನು ನೀಡಲಾಗಿದೆ. (1) ಆದಿ ಕ್ರೈಸ್ತರು ಯೂದಾಯರ ಪದ್ಧತಿಗಳನ್ನು ರದ್ದುಮಾಡಿ,

ಅವರಿಂದ ದೂರವಾದದ್ದು ಮೊದಲನೆಯ ಕಾರಣವಾಗಿರುತ್ತದೆ. ಈ ಹೇಳಿಕೆಯಿಂದ, ಯೆಹೂದ್ಯರ ವಾದ್ಯಗಳನ್ನು ಆರಾಧನೆಗೆ ಪರಿಚಯಿಸಿಕೊಂಡರು ಎಂಬ ವಿಷಯವನ್ನು ಸ್ಪಷ್ಟಪಡಿಸುತ್ತದೆ - ಆದ್ದರಿಂದ ಆದಿ ಕ್ರೈಸ್ತರು ಯೆಹೂದ್ಯರಿಂದ ಪ್ರತ್ಯೇಕವಾಗಿ, ವಾದ್ಯಗಳನ್ನು ಆರಾಧನೆಯಲ್ಲಿ ಉಪಯೋಗಿಸಲು ನಿರಾಕರಿಸಿದರು.

ಈ ವಿಧವಾದ ವಾದದಲ್ಲಿ ಇರುವ ಕಾರಣವು, ಆದಿ ಕ್ರೈಸ್ತರು ಆರಾಧನೆಯಲ್ಲಿ ತಮ್ಮದೇ ಆದ ನಿಯಮಗಳನ್ನೂ ಹೊಂದಿದ್ದರು ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಇದಕ್ಕೆ ವ್ಯತಿರಿಕ್ತ ವಾಗಿ, ಪೌಲನು ಸಭೆಯಲ್ಲಿ ನಿರ್ದಿಷ್ಟವಾದ ಹಾಡುಗಳನ್ನು ಹಾಡುವ ಕುರಿತು ಉಪದೇಶವನ್ನು ನೀಡಿದನು (ಎಫೆಸ 5:19; ಕೊಲೊಸ್ಸೆ 3:16).

ಅದರಲ್ಲಿ ಮತ್ತೊಂದು ಸಮಸ್ಯೆ ಏನೆಂದರೆ, ಯೆಹೂದ್ಯರು ಸಹ, ತಮ್ಮ ದೇವಾಲ ಯದಲ್ಲಿ ಆರಾಧನೆಯಲ್ಲಿ ವಾದ್ಯಗಳನ್ನು ಉಪಯೋಗಿಸಿರಲಿಲ್ಲ. (ಸೆರೆಯಾಳುಗಳಾಗಿ ಹೋದಾಗಲೂ) ಆದುದರಿಂದ, ಯೆಹೂದ್ಯರು ಅವುಗಳನ್ನು ಉಪಯೋಗಿಸದೆ ಇದ್ದದರಿಂದ, ಆದಿ ಕ್ರೈಸ್ತರು ಸಹ ಉಪಯೋಗಿಸಲಿಲ್ಲ ಎಂಬ ನಿರ್ಣಯವು ತಪ್ಪಾಗುತ್ತದೆ, ಯಾಕೆಂದರೆ ಅದು ಅದರ ತರ್ಕಕ್ಕೆ ಸರಿಹೊಂದುವದಿಲ್ಲ. ಯೆರುಸಲೇಮಿನ ದೇವಾಲಯದಲ್ಲಿ ಅವರು ವಾದ್ಯಗಳನ್ನು ಉಪಯೋಗಿಸಿರುವದು ನಿಜವಾಗಿದೆ. ರೋಮಾಪುರದಲ್ಲಿ ಚದರಿ ಹೋಗಿದ್ದ ಯೆಹೂದ್ಯರ ಸಭಾಮಂದಿರಗಳಲ್ಲಿ ವಾದ್ಯಗಳನ್ನು ಉಪಯೋಗಿಸಿರಲಿಲ್ಲ (ಪಾಲಿಸ್ತೇನದಲ್ಲಿ ಇದ್ದವರಲ್ಲಿಯೂ) ಅನ್ಯರಲ್ಲಿಯು ಈ ಪದ್ಧತಿಯು ನಿಷಿದ್ಧವಾಗಿತ್ತು ಎಂಬುದನ್ನು ರೋಮಾಯದ ನಾಗರೀಕರು ಅರಿತಿದ್ದರು, ಈ ವಿಷಯವು ಆದಿ ಕ್ರೈಸ್ತರು ಯೆಹೊದ್ಯರೊಂದಿಗೆ ಹೊಂದಾಣಿಕೆ ಮಾಡಿಕೊಂಡಿದ್ದರು ಎಂಬ ಆಲೋಚನೆಯನ್ನು ಅನ್ಯರು ಹೊಂದಿದ್ದರು.

(2) ಯಾಕೆ, ಆದಿಕ್ರೈಸ್ತರು ವಾದ್ಯಗಳನ್ನು ಬಳಸಲಿಲ್ಲ ಎಂಬುದಕ್ಕೆ ಇನ್ನೊಂದು ಕಾರಣವು ಇರುತ್ತದೆ. ಆರಾಧನೆ ಸಂಗೀತದ ಯಾವ ಹಿನ್ನೆಲೆಯು ಇರಲಿಲ್ಲ. ಆದಿ ಕ್ರೈಸ್ತರು, ಸಭಾ ಮಂದಿರದ ಆರಾಧನೆಯ ಪ್ರಕಾರವೇ, ತಮ್ಮ ಆರಾಧನೆಯನ್ನು ಯೋಜಿಸಿದ್ದರು, ಮುಖ್ಯವಾಗಿ, ಇಬ್ರಿಯರಿಂದ ಆದಿ ಕ್ರೈಸ್ತರು ಪ್ರತ್ಯೇಕಗೊಂಡ ಸಂದರ್ಭದಲ್ಲಿ,[24] ಇಲ್ಲಿ ಯೆಹೂದ್ಯರು ತಮ್ಮ ಅಭಿಲಾಷೆಯ ಪ್ರಕಾರ ಆರಾಧನೆಯನ್ನು ಮಾಡಿದರೇ ವಿನಃ ದೇವರ ಮಾರ್ಗದರ್ಶನದಂತೆ ಮಾಡಲಿಲ್ಲ ಎಂಬ ಸೂಚನೆಯು ಇಲ್ಲಿ ಇರುತ್ತದೆ.

(3) ಆದಿ ಕ್ರೈಸ್ತರಿಗೆ ಉಂಟಾಗಿದ್ದ ಹಿಂಸೆಯ ನಿಮಿತ್ತ ಅಧಿಕಾರ ವರ್ಗವನ್ನು ದೂರವಿಡುವ ಕಾರಣದಿಂದ, ಸಂಗೀತವನ್ನು ಅವರು ಉಪಯೋಗಿಸಲಿಲ್ಲ ಎಂಬ ಪ್ರತೀತವು ಇರುತ್ತದೆ. ಈ ಯೋಚನೆಗೆ ಅನುಗುಣವಾಗಿ, ಆರಾಧನೆಯಲ್ಲಿ ಒಪ್ಪಿಕೊಳ್ಳುವ ಒಂದು ನಿಯಮವನ್ನು ಅವರು ಪರಿಚಯಿಸಿದ್ದರು ಎಂದು ತಿಳಿಯುತ್ತೇವೆ - ಇದಕ್ಕೆ ವ್ಯತಿರಿಕ್ತವಾಗಿ, ಚರಿತ್ರೆಯಲ್ಲಿ ಮೊದಲ ಶತಮಾನದ ಅಂತ್ಯದಲ್ಲಿ ಆರಾದನೆಯ ಆಚರಣೆಯ ಪದ್ಧತಿಗಳನ್ನು ಪರಿಚಯಿಸಿರುವಾಗಲೂ, ಹಿಂಸೆಯ ವಿಸ್ತರಣೆಯಾಗಿರಲಿಲ್ಲ ಎಂದು ಗ್ರಹಿಸುತ್ತೇವೆ.[25]

ಮುಂದೆ, ಕ್ರಿ.ಶ. ಏಳನೆಯ ಶತಮಾನದವರೆಗೆ, ಆರಾಧನೆಯಲ್ಲಿ ವಾದ್ಯಗಳನ್ನು ಪರಿಚಯಿಸಿರಲಿಲ್ಲ (ಒಂದು ಅಥವಾ ಎರಡು ಸಂದರ್ಭಗಳನ್ನು ಹೊರತುಪಡಿಸಿ),[26] ರೋಮಾ ಚಕ್ರವರ್ತಿಗಳ ಅಧಿಕಾರದಲ್ಲಿ ಸುಮಾರು ಮೂರು ಶತಮಾನಗಳು ಕಳೆದ ನಂತರ, ಕ್ರೈಸ್ತತ್ವವನ್ನು ಅಧಿಕೃತಗೊಳಿಸಲಾಯಿತು (ಕ್ರಿ.ಶ. 313,[27] ಕಾನ್‌ಸ್ಟಂಟೈನ ಸಮಯದಲ್ಲಿ) ಆದಿ ಸಭೆಯಲ್ಲಿ ವಾದ್ಯಗಳನ್ನು ಬಳಸಲಿಲ್ಲ ಎಂಬುದೇ "ಕಾಪೆಲ್ಲ" ಹಾಡಿನ ಮೂಲವಾಗಿರುತ್ತದೆ, ಅದರಲ್ಲಿ ವಾದ್ಯಗಳ ನಿಷೇದವಾಗಿದ್ದು ಕೇವಲ ಸ್ವರದಿಂದ ಮಾತ್ರ ಹಾಡುವುದು.

ಇನ್ನೊಂದು ಕಾರಣವೇನೆಂದರೆ, ತಮಗೆ ಆಕರ್ಷಣೆ ಮಾಡಿಕೊಳ್ಳದಂತೆ, ಈ ಬಲಹೀನತೆಯನ್ನು ತೆಗೆದುಹಾಕುವ ಸಲುವಾಗಿ, ವಾದ್ಯಗಳನ್ನು ನಿರಾಕರಿಸಿದರು. ಹೊಸ ಒಡಂಬಡಿಕೆಯಲ್ಲಿ ಒಂದು ವೇಳೆ ಈ ಹೇಳಿಕೆಯು ಇರುವದಾಗಿದ್ದರೆ, ಮೇಲಿನ ವಿಷಯಕ್ಕೆ ಒತ್ತು ನೀಡಲಾಗುತ್ತಿತ್ತು, ಯಾವುದೇ ಕಾರಣಗಳಿದ್ದರೂ, ಸಂಪೂರ್ಣ ಮನವರಿಕೆಯಾಗುವದಿಲ್ಲ.

ದೇವರ ವಾಕ್ಯವನ್ನು ಕಲಬೆರಕೆ ಮಾಡುವ ವಿಷಯದಲ್ಲಿ ಎಚ್ಚರಿಕೆಯನ್ನು ನೀಡಲಾಗಿದೆ. ಹೊಸ ಮತ್ತು ಹಳೇ ಒಡಂಬಡಿಕೆಯಲ್ಲಿಯೂ ಈ ಹೇಳಿಕೆಯು ಇರುತ್ತದೆ.

ಮೋಶೆಯು ಇಸ್ರಾಯೇಲ್ಯರನ್ನು ಎಚ್ಚರಿಸಿ, ಅವರು ಕಾನಾನ್ ದೇಶವನ್ನು ಪ್ರವೇಶಿಸುವ ಸಮಯದಲ್ಲಿ, "ಈ ಮಾತುಗಳನ್ನು ನೀವು ಕೈಕೊಳ್ಳ ಬೇಕೆ ಹೊರತು ಅವುಗಳಿಗೆ ಏನೂ ಕೂಡಿಸಬಾರದು, ಅವುಗಳಿಂದ ಏನೂ ತೆಗೆದುಬಿಡಬಾರದು." ಇದು ದೇವರ ಅಪ್ಪಣೆ ಎಂದು ತಿಳಿಸಿದನು (ಧರ್ಮೋಪದೇಶಕಾಂಡ 4:1, 2). ಇನ್ನೊಂದು ವಾಕ್ಯವೂ ಸಹ ಇದೇ ರೀತಿ ಯಾಗಿ ತಿಳಿಸುತ್ತದೆ,

> ದೇವರ ಪ್ರತಿಯೊಂದು ಮಾತು ಶುದ್ಧವಾದದ್ದು;
> ಆತನು ಶರಣಾಗತರಿಗೆ ಗುರಾಣಿಯಾಗಿದ್ದಾನೆ.
> ಆತನ ಮಾತುಗಳಿಗೆ ಯಾವದನ್ನೂ ಸೇರಿಸಬೇಡ;
> ಆತನು ನಿನ್ನನ್ನು ಖಂಡಿಸುವಾಗ ನೀನು ಸುಳ್ಳುಗಾರ
> ನೆಂದು ತೋರಿಬಂದೀಯೆ (30:5, 6).

ಹೊಸ ಒಡಂಬಡಿಕೆಯಲ್ಲಿ ಯೋಹಾನನು ಎಚ್ಚರಿಸಿ,

> ಈ ಪುಸ್ತಕದ ಪ್ರವಾದನಾ ವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ ಏನಂದರೆ ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ತಂದುಹಾಕಿದರೆ ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ತಂದುಹಾಕುವನು. ಯಾವನಾದರೂ ಈ ಪ್ರವಾದನಾ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ ತೆಗೆದುಬಿಟ್ಟರೆ ಈ ಪುಸ್ತಕದಲ್ಲಿ ಬರೆದಿರುವ ಪರಿಶುದ್ಧ ಪಟ್ಟಣದಲ್ಲಿಯೂ ಜೀವವೃಕ್ಷದಲ್ಲಿಯೂ ಅವನಿಗಿರುವ ಪಾಲನ್ನು ದೇವರು ತೆಗೆದುಬಿಡುವನು (ಪ್ರಕಟನೆ 22:18, 19).[28]

ರಕ್ಷಿಸಲಾರದಂತ ವಿಷಯಗಳಿಂದ ಸುವಾರ್ತೆಯನ್ನು ಅಶುದ್ಧಮಾಡಬಾರದೆಂದು, ಪೌಲನು ಸಹ ಗಲಾತ್ಯದವರಿಗೆ ಎಚ್ಚರಿಕೆಯನ್ನು ನೀಡಿದನು:

> ಕ್ರಿಸ್ತನ ಕೃಪೆಯಿಂದ ನಿಮ್ಮನ್ನು ಕರೆದಾತನನ್ನು ನೀವು ಇಷ್ಟು ಬೇಗನೆ ಬಿಟ್ಟು ಬೇರೆ ಸುವಾರ್ತೆಯನ್ನು ಹಿಡಿದಿರುವದಕ್ಕೆ ಆಶ್ಚರ್ಯಪಡುತ್ತೇನೆ. ಅದು ಸುವಾರ್ತೆಯೇ ಅಲ್ಲ, ಆದರೆ ಕೆಲವರು ನಿಮ್ಮಲ್ಲಿ ಭೇದವನ್ನು ಹುಟ್ಟಿಸುತ್ತಾ ಕ್ರಿಸ್ತನ ಸುವಾರ್ತೆಯನ್ನು ಮಾರ್ಪಡಿಸುವದಕ್ಕೆ ಅಪೇಕ್ಷಿಸುತ್ತಾ ಇದ್ದಾರೆ. ಆದರೂ ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದದ್ದನ್ನು ನಾವೇ ಆಗಲಿ ಪರಲೋಕದಿಂದ ಬಂದ ದೇವದೂತನೇ, ಆಗಲಿ ನಿಮಗೆ ಸಾರಿದರೆ ಅವನು ಶಾಪಗ್ರಸ್ತನಾಗಲಿ ಎಂದು ನಾವು ಮೊದಲು ಹೇಳಿದ್ದತೆಯೇ ಈಗಲೂ ನಾನು ತಿರಿಗಿ ಹೇಳುತ್ತೇನೆ! (1:6-9).

ವಾದ್ಯಗಳನ್ನು ಉಪಯೋಗಿಸುವ ಕುರಿತು ಈ ವಾಕ್ಯಗಳನ್ನು ಬರೆಯಲಾಗಲಿಲ್ಲ ಎಂದು ಕೆಲವರ ವಾಗ್ವಾದ. ಅಂತಹ ಹೇಳಿಕೆಗಳನ್ನು ವಾಕ್ಯಗಳಿಂದಲೂ, ಪರಿಶೀಲಿಸ ಬೇಕು. ದೇವರ ವಾಕ್ಯಕ್ಕೆ ಏನನ್ನು ಸೇರಿಸದಂತೆ ಮತ್ತು ತೆಗೆದು ಹಾಕದಂತೆ ನಮ್ಮನ್ನು ಎಚ್ಚರಿಸುತ್ತವೆ.

ಜನರು ದೇವರ ಸನ್ನಿದಿಗೆ ಬರುವದನ್ನು ದೇವರು ಗಂಭೀರವಾಗಿ ಪರಿಗಣಿಸಿದ್ದನು. ನಮ್ಮ ಪ್ರಾರ್ಥನೆಗೆ ಪ್ರತಿಫಲದ ಮಾರ್ಗದರ್ಶನವನ್ನೂ ನೀಡಿರುವನು. ಮಾನವನ ದೃಷ್ಟಿಯಲ್ಲಿ ಈ ವಿಷಯವು ಹಿಡಿಸಲಾರದ ವಿಷಯವಾಗಿರಬಹುದು. ದೇವರು ನಮ್ಮ ದೃಷ್ಟಿಯಂತೆ ನೋಡದೆ ಇರುವಾಗ, ಆತನ ಮಾರ್ಗದರ್ಶನಕ್ಕೆ ಪ್ರಾಮುಖ್ಯತೆಯನ್ನು ನೀಡಬೇಕು.

1 ಕೊರಿಂಥ 10ರಲ್ಲಿ ಹಳೇ ಒಡಂಬಡಿಕೆಯ ಇಸ್ರಾಯೇಲ್ಯರಿಗೆ ಉಂಟಾದ ಘಟನೆಯ

ಮಾದರಿಯು, ನಮಗೂ ಆಗಬಾರದೆಂದು ದೇವರು ಬಯಸಿರುವದರಿಂದ, ಅವರು ಮಾಡಿದ, ಪಾಪದಂತೆ ನಾವು ಮಾಡದವರಾಗೋಣ. ಆತನ ಇಷ್ಟಕ್ಕೆ ವಿರೋಧವಾಗಿ ನಡೆದವರನ್ನು ದೇವರು ಶಿಕ್ಷಿಸಿದನು.

ಅಧಿಕೃತವಲ್ಲದ ಬೆಂಕಿಯನ್ನು ಉಪಯೋಗಿಸಿ, ಧೂಪವನ್ನು ಸುಟ್ಟಂತ ನಾದಾಬ್ ಮತ್ತು ಅಬಿಹುರವರನ್ನು ದೇವರು ಹೀನವಾಗಿ ಶಿಕ್ಷಿಸಿದನು (ಯಾಜಕಕಾಂಡ 10:1, 2) ಬೈಬಲ್ ತಿಳಿಸುತ್ತದೆ, ಯಹೋವನ ಸನ್ನಿಧಿಯಿಂದ ಬೆಂಕಿ ಹೊರಟು ಅವರನ್ನು ನಾಶಮಾಡಿತು, ಅದಕ್ಕೆ ಕಾರಣವೇನೆಂದರೆ ಯಾಜಕಕಾಂಡ 10:3ರಲ್ಲಿ: "... ನಾನು ಪರಿಶುದ್ಧನೆಂಬದನ್ನು ನನ್ನ ಬಳಿಯಲ್ಲಿರುವವರ ಮೂಲಕವಾಗಿಯೇ ತೋರಿಸುವೆನು, ಜನರೆಲ್ಲರಿಗೆ ತಿಳಿಯುವಂತೆ ನನ್ನ ಘನತೆಯನ್ನು ಸ್ಥಾಪಿಸುವೆನು ಎಂಬದೇ, ..." ದೇವರ ನಿಯಮದಂತೆ, ಆತನನ್ನು ಪರಿಶುದ್ಧವಾಗಿ ಕಾಣಬೇಕು. ಆರೋನನ ಮಕ್ಕಳು ಅದನ್ನು ಮೀರಬಾರದಿತ್ತು.

ಬಂಡೆಗೆ ಮೋಶೆಯು ಮಾತನಾಡಬೇಕಿತ್ತೇ ವಿನಃ ಅದನ್ನು ಒಡೆಯಬಾರದಿತ್ತು, ಈ ಕ್ಷುಲ್ಲಕ ಕಾರಣಕ್ಕಾಗಿ, ಮೋಶೆಯ ಕಾನಾನ್ ದೇಶವನ್ನು ಸೇರದಂತ ಶಿಕ್ಷೆಗೆ ಬಲಿಯಾದನು (ಅರಣ್ಯಕಾಂಡ 20:2-13), ಅವನು "ಇಸ್ರಾಯೇಲ್ ಮಕ್ಕಳ ಮುಂದೆ" ದೇವರನ್ನು ಪರಿಶುದ್ಧವೆಂದು ತಿಳಿಯದ ದೆಸೆಯಿಂದ, ದೇವರ ಶಿಕ್ಷೆಗೆ ಪಾತ್ರನಾದನು (ವಚನ 12).

ಕಠಿಣ ಶಿಕ್ಷೆಯ ಕುರಿತಾದ ಹಳೆ ಒಡಂಬಡಿಕೆಯ ಮತ್ತೊಂದು ಉದಾಹರಣೆಯು ಉಜ್ಜೆಯ (ಹಜ್ಜಯ್ಯನ) ಕುರಿತಾಗಿದೆ. ಆತನು ದೇವರಿಗೆ ದೀಪವನ್ನು ಅರ್ಪಿಸುವದರಲ್ಲಿ ಆತನ ಕೆಲಸವಿಲ್ಲದ್ದದರು ಮಾಡಲು ತೊಡಗಿದನು. ದೇವರು ಆತನನ್ನು ಕುಷ್ಠ ರೋಗದಿಂದ ಶಿಕ್ಷಿಸಿದನು. ಆತನ ಮುಂದಿನ ಜೀವಿತವು ದಿಗ್ಭಂಧನ ಸ್ಥಿತಿಗೆ ಒಳಗಾಯಿತು (2 ಕೊರಿಂಥ 26:16-21).

ದೇವರ ಸನ್ನಿಧಿಗೆ ಅಗೌರವ ಸಲ್ಲಿಸಿದವರಿಗೆ ಉಂಟಾದ ಶಿಕ್ಷೆಯ ಕುರಿತಾಗಿಯೂ ಹೊಸ ಒಡಂಬಡಿಕೆಯಲ್ಲಿ ನೋಡುತ್ತೇವೆ. ಅನನಿಯ ಮತ್ತು ಸಫೈರರು ಇದ್ದಕ್ಕಿದ್ದ ಹಾಗೆ ಮರಣಕ್ಕೆ ತುತ್ತಾದರು (ಅಪೊಸ್ತಲರಕೃತ್ಯಗಳು 5:1-11).

ನಾವು ಆತನ ಸನ್ನಿಧಿಯಲ್ಲಿ ಮೃದು ಹೃದಯದವರಾಗಿರಬೇಕು. ಆತನ ಸನ್ನಿಧಿಗೆ ಗೌರವದಿಂದ ಬರಬೇಕು.

ಪ್ರಖ್ಯಾತಗೊಂಡ, ಹೇಳಿಕೆಯ ಪ್ರಕಾರ ಆಚಾರಗಳು ವ್ಯರ್ಥ ಎಂದು ಹೇಳುವುದು ತಪ್ಪಾಗುತ್ತದೆ ಜನರು ಹೃದಯ ಪೂರ್ವಕಾಗಿ ಕಾರ್ಯಗಳನ್ನು ಮಾಡದೆ ಇರುವಂಥದ್ದು, ದೇವರಿಗೆ ಇಷ್ಟವಲ್ಲದ ಸಂಗತಿಯಾಗಿರುತ್ತದೆ. ಪರಿಸಾಯರಿಗೆ ವಿರುದ್ಧವಾಗಿ ಶಪಿಸುವಾಗ, ಅವರ ಹೊರಗಿನ ಚಟುವಟಿಕೆಗಳಿಗೆ ಮಾತ್ರ ತೋರುವದಾಗಿದ್ದು, ಹೃದಯವು ದೂರವಾಗಿತ್ತು ಎಂದು ಯೇಸು ಹೇಳಿದನು:

> ಅಯ್ಯೋ, ಕಪಟಿಗಳಾದ ಶಾಸ್ತ್ರಿಗಳೇ ಫರಿಸಾಯರೇ, ನೀವು ಮರುಗ ಸೋಪು ಜೀರಿ ಗೆಗಳಲ್ಲಿ ಹತ್ತರಲ್ಲೊಂದು ಪಾಲು ಕೊಡುತ್ತೀರಿ ಸರಿ, ಆದರೆ ಧರ್ಮಶಾಸ್ತ್ರದಲ್ಲಿ ಗೌರವವಾದದ್ದನ್ನು, ಅಂದರೆ ನ್ಯಾಯವನ್ನು ಕರುಣೆಯನ್ನೂ ನಂಬಿಕೆಯನ್ನೂ ಬಿಟ್ಟುಬಿಟ್ಟಿರಿ. ಇವುಗಳನ್ನು ಮಾಡಬೇಕಾಗಿತ್ತು; ಅವುಗಳನ್ನೂ ಬಿಡಬಾರದು (ಮತ್ತಾಯ 23:23).

ಕೆಲವರು ಈ ವಾಕ್ಯಭಾಗದಲ್ಲಿ ಕೆಲವು ಸಿದ್ಧಾಂತಗಳನ್ನು ಮಾಡಿರುವರು (ಉದಾಹರಣೆ: ಸಭೆಯ ಸಂಘಟನೆ, ದೀಕ್ಷಾಸ್ನಾನ, ಮತ್ತು ಕಾಪೆಲ್ಲ ಹಾಡಿನ ಬಗ್ಗೆ) ನ್ಯಾಯ ನೀತಿ, ಕರುಣೆಯನ್ನು ಆಚರಣೆ ಮಾಡುವಾಗ, ಇತರ ಕಾರ್ಯಗಳು ಪ್ರಾಮುಖ್ಯವಲ್ಲ ಎಂದಿರುವರು, ಆದಾಗ್ಯೂ ನ್ಯಾಯ, ನೀತಿ ಮತ್ತು ಕರುಣೆಯಂತೆ, ಆಚಾರವು ಪ್ರಾಮುಖ್ಯವಾದದ್ದು ಎಂದು ಯೇಸು ತಿಳಿಸಿರುವನು. ದೇವರ ಸಂಬಂಧದಲ್ಲಿ, ನಾವು ಒಂದನ್ನು ಹೊಂದಿರುವಾಗ, ಇನ್ನೊಂದನ್ನು

ಅಲಕ್ಷಿಸಬೇಕು ಎಂದು ಯೇಸು ಹೇಳಿರುವದಿಲ್ಲ. ನಮ್ಮ ಹೃದಯವು ದೇವರೊಂದಿಗೆ ಸಂಬಂಧವನ್ನು ಹೊಂದದೆ ಇರುವಾಗ ಆಚಾರ ಮತ್ತು ವಿಚಾರಗಳು ವ್ಯರ್ಥವಾಗುತ್ತವೆ; ನಮ್ಮ ಹೃದಯವು ಸರಿಯಾಗಿದ್ದರೆ, ಆಚಾರ ವಿಚಾರಗಳು ನಮ್ಮ ನಂಬಿಕೆಗೆ ಸಹಕಾರ ನೀಡುತ್ತವೆ. ನ್ಯಾಯ, ನೀತಿ ಮತ್ತು ಕರುಣೆಯ ನಿಮಿತ್ತ, ಆಚಾರವನ್ನು ನಿರಾಕರಿಸುವುದು ನಂಬಿಕೆಗೆ ಅಪಾಯಕಾರಿಯಾಗಿರುತ್ತದೆ, ಯಾಕಂದರೆ ದೇವರು ತಾನೆ ನಂಬಿಕೆಗೆ ಯೋಗ್ಯವಾದ ನೀತಿ ಯನ್ನು ರೂಪಿಸಿದ್ದಾನೆ!

ಪ್ರರ್ವತ ಪ್ರಸಂಗದಲ್ಲಿ, ಯೇಸು, "ಆ ದಿವಸದಲ್ಲಿ" ಜನರು ಎಂದು ವಿವರಿಸಿ (ನ್ಯಾಯ ತೀರ್ಪು) ಜನರು ಸ್ವಾಮಿ, ಸ್ವಾಮಿ ಎಂದು ಕರೆಯುವರು. ಕೆಲವರು ಆತನ ಹೆಸರಿನಲ್ಲಿ ಮಹತ್ಕಾರ್ಯಗಳನ್ನು ಮಾಡಿದ್ದಾಗ್ಯೂ, "ನಾನು ನಿಮ್ಮನ್ನು ಅರಿಯನು, ನನ್ನಿಂದ ತೊಲಗಿ ಹೋಗಿರಿ, ನೀವು ಅನೀತಿಯನ್ನು ಮಾಡುವವರೆ ಅಂದನು" (ಮತ್ತಾಯ 7:23). ಅವರು ಆತನಿಂದ ದೂರವಾಗಿದ್ದರು, ಅದಕ್ಕೆ ಕಾರಣ, ಅವರ ಅವಿದೇಯತೆಯೇ!

ನಾವು ಒಪ್ಪುವಂಥ ಕಾರ್ಯಗಳನ್ನು ಮಾಡುವದರಿಂದ, ಆತನ ಪ್ರಭುತ್ವವನ್ನು ಪ್ರಚುರಪಡಿಸುವದಿಲ್ಲ. ಅದು ನಿಜವಾದ ಸವಾಲಾಗಿರುವದಿಲ್ಲ. ಅದರ ಬದಲಾಗಿ, ಆತನು ಹೇಳುವ ಮಾತಿಗೆ ವಿದೇಯರಾಗುವದಕ್ಕೆ ಕಾರಣವಿಲ್ಲದಿದ್ದರೂ, ಅದನ್ನು ನಾವು ಅರ್ಥಮಾಡಿಕೊಳ್ಳದಿದ್ದರು, ಅದನ್ನು ಒಪ್ಪದೆ ಇದ್ದರೂ, ನಂಬಿಕೆಯಿಂದ ಆತನ ಮಾತುಗಳಿಗೆ ವಿಧೇಯರಾಗುವಾಗ, ಆತನ ಪ್ರಭುತ್ವವನ್ನು ಪ್ರಚುರ ಪಡಿಸುತ್ತೇವೆ. ಪ್ರಭುತ್ವದ ಪ್ರಶ್ನೆಯಲ್ಲಿ, ಅದರ "ಯಜಮಾನನು ಯಾರು?"

ಸೈದ್ಧಾಂತಿಕ ವಿಷಯಗಳಿಗೆ ಹೆಚ್ಚು ಗ್ರಾಸ ನೀಡಲಾಗಿದೆ ಎಂದು ನಾನು ಒಪ್ಪುತ್ತೇನೆ. ಪ್ರೀತಿಯ ಉಪದೇಶದ ಕೊರತೆ, ಅನುಕಂಪ, ಕರುಣೆ, ನೀತಿ, ಹಾಗು ಕರುಣೆ ಬೋಧ ನೆಯ ಕುರಿತು ವಿವಿಧ ಕ್ರೈಸ್ತ ಗುಂಪುಗಳ ನಡುವೆ ಸೈದ್ಧಾಂತಿಕ ವಿಚಾರಗಳು ಸರಹದ್ದನ್ನು ನಿರ್ಮಿಸುತ್ತದೆ, ಬೈಬಲಿನ ಐಕ್ಯತೆಯನ್ನು ಹೊಂದುವ ವಿಷಯದಲ್ಲಿ ಉಪದೇಶಗಳನ್ನು ಈಗಾಗಲೇ ನೀಡಿದ್ದೇವೆ. (ಇದು ಈ ದಿನದ "ಕ್ರೈಸ್ತರ" ಕೊರತೆಯಾಗಿದೆ.[29])

ಒಂದು ಕ್ರೈಸ್ತ ಗುಂಪು ಒಂದು ಕಾರ್ಯವನ್ನು ಮಾಡುತ್ತಿರುವಾಗ, ಇನ್ನೊಂದು ಗುಂಪು ಏನನ್ನು ಮಾಡುತ್ತಿರುವದಿಲ್ಲ ಎಂಬುದು ತೊಡಕಿನ ಅಪಾಯವಾಗಿರುತ್ತದೆ. ಸೈದ್ಧಾಂತಿಕ ವಿಚಾರಗಳನ್ನು ನಾವು ಮಾಡದೆ ಅಥವಾ ಮಾಡಲೂ ಬಹುದು; ನಾವು ಅದನ್ನು ನಂಬಬಹುದು ಅಥವಾ ನಂಬದೆ ಇರಬಹುದು. ಪ್ರೀತಿ, ನೀತಿ, ಕರುಣೆಯ ಮತ್ತು ದಯೆಯ ಸದೃಶ್ಯವಾ ಗಿರುತ್ತದೆ (ಸಂಬಂಧಿತ ವಿಷಯಗಳು). ಅವುಗಳನ್ನು ವಿವಿಧ ಕೋನದಲ್ಲಿ ಹೊಂದಿರುತ್ತೇವೆ. ಇದರಲ್ಲಿ ಬೆಳವಣಿಗೆ ಮತ್ತು ಪರಿಪಕ್ವತೆ ಇರುತ್ತದೆ, ಈ ವಿಷಯದಲ್ಲಿ ಪ್ರತಿಯೊಬ್ಬ ಕ್ರೈಸ್ತನು ಬೆಳೆದು ಪರಿಪಕ್ವತೆಗೆ ಬರಬೇಕು (ಉದಾಹರಣೆ, 2 ಪೇತ್ರ 1:5-8)[30] ಒಬ್ಬ ವ್ಯಕ್ತಿಯಾಗಲೀ ಅಥವಾ ಒಂದು ಗುಂಪಾಗಲೀ ಮಾಡುವದನ್ನು ಮತ್ತು ಮಾಡದೆ ಇರುವದನ್ನು ನಿರಾಕರಿಸು ವಾಗ (ಸುಲಭವಾದನ್ನು ಕಂಡು ಹಿಡಿಯುವ) ಸಂಬಂಧಿತ ವಿಷಯಗಳನ್ನು ಮಾಡಬೇ ಕಾಗುತ್ತದೆ. ಇವೆರಡೂ ಸಹ ಪ್ರಾಮುಖ್ಯ ಎಂದು ಯೇಸು ತಿಳಿಸಿರುವನು (ಮತ್ತಾಯ 7:21-23 ಮತ್ತು 23:23). ಸೈದ್ಧಾಂತಿಕವಾಗಿ ದೃಢವಾಗಿರುವ ಗುಂಪನ್ನು ತೊರೆದು, ಇತರ ವಿಷಯಗಳಲ್ಲಿ ಅಭಿವೃದ್ಧಿ ಹೊಂದಿರುವ ಗುಂಪನ್ನು ಸೇರಿಸಿಕೊಳ್ಳುವವರಿಗೆ ಎಚ್ಚರಿಕೆಯನ್ನು ನೀಡುತ್ತೇನೆ.

ಕೆಲವು ವಿಷಯಗಳನ್ನು ಅನುಸರಿಸಿ ಪಾಪದ ಸಂಬಂಧವಾದವುಗಳನ್ನು ತೊರೆದು ಬಿಡಬೇಕು. ಪಾಪದ ಅಭ್ಯಾಸವು, ಆತ್ಮಿಕ ನಷ್ಟವನ್ನು ಉಂಟುಮಾಡುತ್ತದೆ (ಗಲಾತ್ಯ 5:19-21). ಹಾಗೂ ಸಕರಾತ್ಮಕ ಸಂಗತಿಗಳಾದ ವಿಧೇಯತೆಯನ್ನು ಅಭ್ಯಾಸ ಮಾಡುವದರಿಂದ ದೇವರ ಮಕ್ಕಳಾಗುತ್ತೇವೆ (2 ಥೆಸಲೋನಿಕ 1:7-9). ಕ್ರೈಸ್ತರ ಕೃಪೆಯನ್ನು ಹೊಂದಿ ಕ್ರಿಸ್ತನ ಸಾರೂಪ್ಯದ ಪರಿಪಕ್ವತೆಗೆ ಮುಂದಾಗಬೇಕು (ನೋಡಿರಿ 2 ಪೇತ್ರ 1:5-8). ಸಕಲ ವಿಧ

ವಾದ ನೇಮ ನಿಷ್ಟೆಗಳಿಂದ ಸ್ವತಂತ್ರರಾಗಿದ್ದೇವೆಂಬುದಾಗಿ ತಿಳಿಯುವದು, ಸತ್ಯದಿಂದ ನಮ್ಮನ್ನು ಪ್ರತ್ಯೇಕಿ ಸಿಕೊಂಡು ಸೈತಾನನಿಗೆ ಒಳಪಡುವಂತಿರುತ್ತದೆ (ರೋಮಾಪುರ 6:1-14).[31]

*ಕ್ರೈಸ್ತರು ಸಭೆಗಳಲ್ಲಿ ಕಾಪೆಲ್ಲಾ ಹಾಡುಗಳನ್ನು ಆರಾಧನೆಯಲ್ಲಿ ಹಾಡುವ ಕುರಿತು 6 ಸಂಗತಿಗಳನ್ನು ನಾನು ತಿಳಿಸುತ್ತೇನೆ.*

**ಆಕ್ಷೇಪಣೆ 1:** *"ಅದು ನಿಷೇಧಿಸಿರುವದಿಲ್ಲ."* ವಾದ್ಯಗಳ ಜೊತೆಯಲ್ಲಿರುವ ಸಂಗೀತ ವನ್ನು ಹೊಸ ಒಡಂಬಡಿಕೆ ನಿರಾಕರಿಸಿರುವದಿಲ್ಲ. ಇದು, ಸತ್ಯಸಂಗತಿಯೇ, ದೃಢ ವಾದ ಹೇಳಿಕೆಯೇ ಅದು ಒಂದು ಭಾಗದ ಗ್ರಹಿಕೆ ಮಾತ್ರ, ಹೇಗೂ, ಭಾಷೆಯ ಸ್ವಭಾವದ ತಿಳುವಳಿಕೆಯ ಅಗತ್ಯವಿರುತ್ತದೆ. ಅದನ್ನು ಸೇರಿಸುವ ಮತ್ತು ನಿರಾಕರಿಸುವ ಕುರಿತು ಭಾಷೆಯ ಆಲೋಚನೆಯನ್ನು ನೀಡುತ್ತದೆ. ಒಬ್ಬ ವ್ಯಕ್ತಿಯು ಫೋರ್ಡ್‌ಕಾರನ್ನು ಆಜ್ಞಾಪಿಸಿದರೆ ವಾಹನ ಮಾರುವನು ಅದರ ಬದಲಾಗಿ ಷವರಲೆಟ್ ಕಾರನ್ನು ನೀಡುವ ಹಕ್ಕನ್ನು ಹೊಂದಿರುವದಿಲ್ಲ. ನಿರ್ದಿಷ್ಟವಾದ ವಾಹನವನ್ನು ಕೋರಿದಾಗ ಅದರ ಬದಲಾಗಿ ಇನ್ನೊಂದನ್ನು ನೀಡುವ ಅಗತ್ಯವಿಲ್ಲ. ಕೆಲವರಿಗೆ ಈ ನಿಯಮವು ಗೊಂದಲ ತರಬಹುದು. ಆದರೆ ದೇವರು ಎಚ್ಚರಿಸಿದಂತೆ ವಾಕ್ಯದಿಂದ ತೆಗೆಯುವದಾಗಲಿ ಅಥವಾ ಸೇರಿಸುವದಾಗಲಿ ನಿರ್ದಿಷ್ಟವಾಗಿ ಕಾಣುತ್ತದೆ. ಈ ವಾಕ್ಯಕ್ಕೆ ಅವಿಧೇಯರಾಗುವದನ್ನು ನಾದಾಬ್ ಮತ್ತು ಅಬಿಹು ಅವರಿಗೆ ಹೋ ಲಿಸಿ ಶಿಕ್ಷೆಯ ಕುರಿತಾಗಿ ತಿಳಿಸಲಾಗಿದೆ (ಯಾಜಕಕಾಂಡ 10), ಬೇರೆ ಸ್ಥಳದಿಂದ ಅವರು ಬೆಂಕಿಯನ್ನು ತರಬಾರದೆಂಬ ನಿಯಮವಿರಲಿಲ್ಲ.

ಈ ಆಕ್ಷೇಪಣೆ ಯಲ್ಲಿರತಕ್ಕ ಇನ್ನೊಂದು ತಪ್ಪೆನೆಂದರೆ ಬೈಬಲಿಗೆ ಎಷ್ಟು ಉತ್ತಮ ವಾದ ಸ್ಥಾನವನ್ನು ನೀಡಬೇಕೆಂಬುದೆ ಆರಾಧನೆಯಲ್ಲಿ ದೇವರು ಬಯಸದ ಎಲ್ಲಾ ಕಾರ್ಯಗಳನ್ನು ನಮೂದಿಸುವದಾಗಿದ್ದರೆ ಬೈಬಲ್ ಬಹಳ ದೊಡ್ಡ ಪುಸ್ತಕವಾಗುತ್ತಿತ್ತು (ಹೆಚ್ಚಳ ವಾದ ಪ್ರತಿಗಳು) ಆದರೆ ಜನರು ಅದನ್ನು ಓದುವದಕ್ಕೂ ಅದರ ತಿಳುವಳಕೆಯನ್ನು ಪಡೆಯುವದಕ್ಕೂ ಅಸಾಧ್ಯವಾಗುತ್ತಿತ್ತು. ಸಹಜವಾಗಿ ದೇವರು ನೀಡಿರುವ ಕನಿಷ್ಟ ಸಂಗತಿಗಳನ್ನು ತಿಳುಕೊಂಡ ನಮ್ಮ ಮಾರ್ಗದರ್ಶನಕ್ಕಾಗಿ ಅವುಗಳನ್ನು ಕಾಪಾಡುವದು ಕಷ್ಟಕರವಾಗುತ್ತಿತ್ತು.

ಆರಾಧನೆಯಲ್ಲಿ ಅನುಮೋದಿಸದೇ ಇರುವ ವಿಷಯಗಳನ್ನು ದೇವರು ನಿರ್ದಿಷ್ಟ ವಾಗಿ ತಿಳಿಸುವದಾಗಿದ್ದರೆ, ಪೂರ್ವಜರಲ್ಲಿಯೇ ಅದರ ಮಾಹಿತಿಯು ಅರ್ಥವಿಲ್ಲದ್ದಾಗಿರುತ್ತಿತ್ತು. ಉದಾಹರಣೆ, ಆತನು ಯಾಂತ್ರಿಕವಾದ ಆರಾಧನೆಯನ್ನು ಅನುಮೋದಿಸಿರಲಿಲ್ಲ, ಯಾಕಂದರೆ ಒಂದು ದಿವಸ ಯಂತ್ರ ಮಾನವನು ಮುಂದೆ ನಿಂತು ಆರಾಧನೆಯನ್ನು ನಡಿಸಬಹುದಿತ್ತು.[32] ಆದರೆ ದೇವರು ಹೆಚ್ಚು ಪರಿಣಾಮಕಾರಿಯಾಗಿ ತಿಳಿಸಿರುವದೇನೆಂದರೆ ತನಗೆ ಬೇಕಾದದ್ದನ್ನು ಮತ್ತು ತನ್ನ ವಾಕ್ಯಕ್ಕೆ ಯಾವುದನ್ನು ಸೇರಿಸಬಾರದೆಂದು ವ್ಯಾಖ್ಯಾನಿಸಿದ್ದಾನೆ.

ದೇವರು ಅಬ್ರಹಾಮನಿಗೆ ಸುನ್ನತಿಯು ಒಡಂಬಡಿಕೆಗೆ ನಿತ್ಯವಾದ ಸಂಕೇತ ವಾಗಿತ್ತೆಂದು ತಿಳಿಸಿದನು (ಆದಿಕಾಂಡ 17:9-14), ಆದರೆ ಪೌಲನು ಈ ಸಂಕೇತವು ದೇವರ ಅನ್ಯೋನ್ಯತೆಗೆ ಸಂಬಂಧಪಟ್ಟಿರುವದಿಲ್ಲವೆಂಬ ಅಂಶವನ್ನು ತಿಳಿಸಿದ್ದಾನೆ. ಒಂದು ವೇಳೆ ಸುನ್ನತಿ ಮಾಡಿಸಿಕೊಳ್ಳುವವನು ಪೂರ್ಣವಾದ ಧರ್ಮಶಾಸ್ತ್ರವನ್ನು ಅನುಸರಿಸುತ್ತೇ ನೆಂದು ಹೇಳುವವನು, ಕ್ರಿಸ್ತನಿಂದ ಪ್ರತ್ಯೇಕವಾಗಿದ್ದಾನೆಂದು ತಿಳಿಸಿದನು (ಗಲಾತ್ಯ 5:1-6). ಸುನ್ನತಿಯು ಸೈದ್ಧಾಂತಿಕ ವಿಷಯವಾಗುವಾಗ ಅದರ ನಿರಾಕರಣೆಯು ಉಂಟಾಯಿತು (ಅಪೊಸ್ತಲರಕೃತ್ಯಗಳು 15).

ಕ್ರಿ.ಶ 7ನೇ, ಶತಮಾನದವರೆಗೂ ವಾದ್ಯ ಸಹಿತವಾದ ಸಂಗೀತವು ಒಂದು ವಿಷಯ ವಾಗಿ ಪರಿಗಣಿಸಿರಲಿಲ್ಲ, ಹೊಸ ಒಡಂಬಡಿಕೆಯಲ್ಲಿ ಅದರ ನಿರಾಕರಣೆಯನ್ನು ಬಯಸಲು ಸಾಧ್ಯವಾಗಲಿಲ್ಲ, ಆದುದರಿಂದ ಸುನ್ನತಿಯ ಉದಹರಣೆಯು ನಮಗೆ ಎಚ್ಚರಿಕೆಯನ್ನು ಮತ್ತು ಸಲಹೆಯನ್ನು ನೀಡುತ್ತದೆ.

ನಾನು ತಿಳಿದಿರುವಂತೆ ಹೊಸ ಒಡಂಬಡಿಕೆಯಲ್ಲಿ ಕರ್ತನಿಗೆ ಪ್ರಾಣಿಯಜ್ಞವನ್ನು ಅರ್ಪಿಸಬಾರದೆಂಬ ನಿರ್ದಿಷ್ಟ ಅನೋಮೋದನೆಯಿರುವದಿಲ್ಲ. ಹೇಗೂ ಯೇಸು ಕ್ರಿಸ್ತನು ಯಜ್ಞದ ಕಾರ್ಯವನ್ನು ನೇರವೇರಿಸಿರುವದರಿಂದ, ಪ್ರಾಣಿವಧೆಯನ್ನು ನಿರ್ಬಂದಗೊಳಿಸಲಾಗಿದೆ. ಹೊಸ ಒಡಂಬಡಿಕೆಯಲ್ಲಿ ಕ್ರೈಸ್ತರು ಸಮರ್ಪಿಸುವ ಯಜ್ಞದ ಕುರಿತಾಗಿ ಎರಡು ವಿಧವಾದ ರೂಪಕಗಳನ್ನು ನೀಡಲಾಗಿದೆ: ನಮ್ಮ ತುಟಿಗಳಿಂದ ಸ್ತೋತ್ರ (ಇಬ್ರಿಯ 13:15) ಮತ್ತು ಆತನ ಸೇವೆಗೆ ನಮ್ಮ ಜೀವಿತವನ್ನು ಸಮರ್ಪಿತವಾಗುತ್ತದೆ (ಪ್ರಕಟನೆ 12:1, 2).

ಅದೇ ರೀತಿಯಾಗಿ ಆರಾಧನೆಯಲ್ಲಿ ಧೂಪವನ್ನು ಸುಡುವ ಕುರಿತು ನಿರ್ಬಂಧವಿರುವದಿಲ್ಲ, ಯಾಕಂದರೆ ಅದು ಹಳೆ ಒಡಂಬಡಿಕೆಯ ಆರಾಧನೆಯಲ್ಲಿ ಪ್ರಮುಖ ಸಂಗತಿಯಾಗಿತ್ತು (ವಿಮೋಚನಕಾಂಡ 30).[33] ಹೇಗೂ, ಆರಾಧನೆಯಲ್ಲಿ ಈ ಪದ್ಧತಿಗಳು ಅನಾವಶ್ಯಕವೆಂದು ಅನೇಕರು ತಿಳಿಯುತ್ತಾರೆ. ಆದರೆ ಬೈಬಲಿನ ರೂಪಕ ಸೂಚನೆಯಲ್ಲಿ ಕ್ರೈಸ್ತರ ಪ್ರಾರ್ಥನೆಯು ಧೂಪದಂತೆ ದೇವರಿಗೆ ಸಮರ್ಪಿತವಾಗುತ್ತದೆ (ಪ್ರಕಟನೆ 5:8).

ಆಕ್ಷೇಪಣೆ 2: *"ಇದು ಆರಾಧನೆಗೆ ಸಹಾಯಕ"* ಆರಾಧನೆಯಲ್ಲಿ ಹಾಡಿನ ಪುಸ್ತಕಗಳನ್ನು ಹಾಗೂ ಇತರ ಸಂಗತಿಗಳನ್ನು ಉಪಯೋಗಿಸುವ ಕುರಿತ ಚರ್ಚೆಯು ಈ ವ್ಯಾಖ್ಯಾನದಲ್ಲಿ ಅಡಕವಾಗಿದೆ. ಒಂದು ಶತಮಾನದ ಹಿಂದೆ M. C. ಕುರ್ಪಿಸ ಎಂಬವರು ಸಾಮಾನ್ಯ ವಾದ ಮತ್ತು ನಿರ್ದಿಷ್ಟವಾದ ಆಜ್ಞೆಗಳ ನಡುವಿನ ವಿಷಯವನ್ನು ಪ್ರಸ್ತಾಪಿಸಿದ್ದಾರೆ.[34] ಹೊಸ ಒಡಂಬಡಿಕೆಯಲ್ಲಿ, ಕರ್ತನು "ಸಂಗೀತವನ್ನು ಹಾಡಿರಿ" ಎಂದು ಸರಳವಾಗಿ ಹೇಳಲಿಲ್ಲ (ಅದಕ್ಕೆ ಸಮಾನವಾದ), ಹಾಡಿರಿ ಎಂದು ನಿರ್ದಿಷ್ಟವಾಗಿ ಹೇಳಿರುವನು. ವಿವಿಧ ರೀತಿಯಲ್ಲಿ ಸಂಗೀತ ವನ್ನು ನುಡಿಸಬಹುದು ಅದರಲ್ಲಿ ಹಾಡು ಮತ್ತು ವಾದ್ಯಗಳು ಸೇರ್ಪಡೆಯಾಗಿರುತ್ತದೆ. ಹಾಡಿನ ಪುಸ್ತಕ ಅಂದರೆ "ಸಂಗೀತ ನುಡಿಸಿರಿ" ಎಂಬುದಾಗಿರುವದಿಲ್ಲ, ಆದರೆ ಅದು ಸಹಾಯಕ.

ಆಕ್ಷೇಪಣೆ 3: *"ಸಭಾ ಕಟ್ಟಡಕ್ಕೆ ಅಧಿಕಾರಿಯು ಇರುವದಿಲ್ಲ"* ಆದಿ ಕ್ರೈಸ್ತರು ಸಭಾಕಟ್ಟಡಗಳನ್ನು ಹೊಂದಿದ್ದರೆಂಬ ಸೂಚನೆಗಳಿರುವದಿಲ್ಲ, ಸದಸ್ಯರಗಳು ಸಭೆಯಾಗಿ ಸೇರ ಬೇಕಿತ್ತು, ಸೇರುವಿಕೆಗಾಗಿ ನಿಗದಿತವಾದ ಸ್ಥಳದ ಅಗತ್ಯತೆಯಿತು. ಆದಿ ಸಭೆಯು ಯೆರುಸಲೇ ಮಿನಲ್ಲಿದ್ದ ದೇವಾಲಯದ ಸಲೋಮೋನನ ಅಂಗಳದಲ್ಲಿ[35] ಸಭೆಯಾಗಿ ಕೂಡಿಕೊಂಡಿದ್ದರು (ಅಪೊಸ್ತಲರಕೃತ್ಯಗಳು 3:11; 5:12), ಖಾಸಗಿ ಮನೆಗಳಲ್ಲೂ (ಫಿಲಮೋನ 2; ಕೊಲೆಸ್ಸೆ 4:15; ರೋಮಾಪುರ 16:5), ನದಿ ತೀರದಲ್ಲೂ (ಅಪೊಸ್ತಲರಕೃತ್ಯಗಳು 16:13), ಮತ್ತು ಎಫೆಸದ ಶಾಲೆಯ ಆವರಣದಲ್ಲಿಯೂ (ಅಪೊಸ್ತಲರಕೃತ್ಯಗಳು 19:9) ಸಭೆಯಾಗಿ ಕೂಡಿ ಬರುತ್ತಿದ್ದರು ಸ್ಥಳದ ಅನಿವಾರ್ಯತೆ ಇದ್ದರೆ, ಮತ್ತು ಅದರ "ಆಕಾರವನ್ನು" ಹೊಸ ಒಡಂಬಡಿಕೆಯಲ್ಲಿ ನೀಡಿ ನಿರ್ದಿಷ್ಟ ಸ್ಥಳವನ್ನು ಸೂಚಿಸಿರುವದಿಲ್ಲ.[36] ನಿರ್ದಿಷ್ಟವಾದ ಸ್ಥಳವನ್ನು ತಿಳಿಸದೇ ಇರುವದರಿಂದ ಆರಾಧನೆಯಲ್ಲಿಯೂ ಸಹ ವಾದ್ಯಗಳ ಅನಿವಾರ್ಯತೆ ಇರುವದಿಲ್ಲ. ಒಂದು ವೇಳೆ ಅದನ್ನು ಬಯಸುವಂತ ಚರ್ಚೆಯಿದ್ದರೆ ಆ ಚರ್ಚೆಯು ಬಲಹೀನವಾದದ್ದೆ.

ಸಭಾ ಕಟ್ಟಡಗಳ ಉಪಯೋಗವು ತಪ್ಪಾಗಿರುವದಾದರೆ, ಇತರೆ ಆಚರಣೆಗಳನ್ನು ಪರಿಚಯಿಸುವದು ಅದು ಸಹ ತಪ್ಪಾಗಿರುತ್ತದೆ. ಯಾಕಂದರೆ ಅದು ಗ್ರಂಥಗಳಿಗೆ ವಿರುದ್ಧ ವಾಗಿರುವದರಿಂದ ಅಜ್ಞಾನವೂ ಆಗಿರುತ್ತದೆ. ಒಂದು ತಪ್ಪು ಇನ್ನೊಂದು ತಪ್ಪನ್ನು ನ್ಯಾಯ ವೆಂದು ನಿರ್ಣಯಿಸುವದಿಲ್ಲ, ಅದು ಸರಿಯಾದ ಯೋಚನೆಯನ್ನು ನೀಡುವದಿಲ್ಲ. ಕರ್ತನನ್ನು ಸಮೀಪವಾಗಿ ಅನುಸರಿಸಿ ನಮ್ಮ ಆಚರಣೆಗಳಲ್ಲಿ ಆತನ ಸಲಹೆಗಳನ್ನು ಪಾಲಿಸಿ ಕರ್ತನ ಚಿತ್ತಕ್ಕೆ ತಕ್ಕಂತೆ ಯಾಕೆ ಜೀವಿಸಬಾರದು?

ಆಕ್ಷೇಪಣೆ 4: *"ದೇವರ ಮಹಿಮೆಗಾಗಿ ನಮ್ಮ ತಲಾಂತುಗಳೆಲ್ಲವನ್ನು ಏಕೆ ಉಪಯೋಗಿಸ ಬಾರದು?"* ಈ ಪ್ರಶ್ನೆಗಳಗೆ "ಹೌದೆಂಬುದು" - ಆ ತಲಾಂತನ್ನು ದೇವರ ಚಿತ್ತಕ್ಕೆ ಉಪಯೋಗಿಸ ಬಾರದಷ್ಟೆ. ಈ ಚರ್ಚೆಯನ್ನು, ವಾದಿಸುವಾಗ, ವ್ಯಕ್ತಿಯು ನ್ಯಾಯಬದ್ಧವಾದ ತಲಾಂತನ್ನು ಹೊಂದಿರಬೇಕು. ಅದನ್ನು ದೇವರ ಮಹಿಮೆಗಾಗಿ ಮತ್ತು "ಸಭೆಯ ಆರಾಧನೆಗಾಗಿ"

ಉಪಯೋಗಿಸು ಎಂಬ ಈ ಎರಡು ವಿಷಯಗಳಲ್ಲಿ ವ್ಯತ್ಯಾಸಗಳು ಅಡಕವಾಗಿವೆ.

ಧಾರ್ಮಿಕ ಪ್ರಪಂಚದಲ್ಲಿ ಬೆಳೆಯುತ್ತಿರುವ ವಿವಿಧ ಗುಂಪಿನ ಚರ್ಚೆ ಏನೆಂದರೆ ನಾವು ಮಾಡುವದೆಲ್ಲವೂ ಆರಾಧನೆ ಎಂಬುದಾಗಿ ಹೇಳುತ್ತಾರೆ. ಇದು ಪೌಲನ ವ್ಯಾಖ್ಯಾನಕ್ಕೆ ಸಂಬಂಧಪಟ್ಟಿರುತ್ತದೆ. ರೋಮಾಪುರ 12:1: ಆದುದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವದೇನೆಂದರೆ ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ, ಇದೆ, ನಿಮ್ಮ ವಿವೇಕ ಪೂರ್ವಕವಾದ ಆರಾಧನೆಯು ಪೌಲನು "ಆರಾಧನೆ" ಎಂಬ ಪದವನ್ನು ಇಲ್ಲಿ ಉಪಯೋಗಿಸಿದ್ದಾನೆ. ಅವನು ನೀಡಿರುವ ಮೂಲ ತತ್ವವೇನೆಂದರೆ ನಾವು ಜೀವಿತದಲ್ಲಿ ಮಾಡುವ ಸಕಲಸಂಗತಿಗಳು ಆರಾಧನೆಗೆ ಸಂಬಂಧಪಟ್ಟಿವೆ, ಆದರೆ ಜೀವಿತದಲ್ಲಿರುವ ಎಲ್ಲವೂ ಸಾಮಾನ್ಯ ಸಭೆಗೆ ಪರಿಚಯ ಮಾಡಿಕೊಳ್ಳುವಂಥ ಸಂಗತಿಗಳಾಗಿರುವದಿಲ್ಲ.

ಆ ಒಟ್ಟಾಗಿ ಆಹಾರವನ್ನು ಸೇವಿಸುವುದು ಸಭೆಯ ಒಂದು ಪಾತ್ರವಾಗಿರುವದಿಲ್ಲ ಎಂಬ ಅಂಶವನ್ನು ಪೌಲನು ಕೊರಿಂಥವರಿಗೆ ತಿಳಿಸಿದನು (1 ಕೊರಿಂಥ 11:25). ಒಬ್ಬನಿಗೆ, ಅಡಿಗೆ ಮಾಡುವ ವರದಾನವಿದ್ದರೆ ಅದನ್ನು ಪರಿಚಯಿಸುವದು ಹಕ್ಕಾಗಿರುವದಿಲ್ಲ ಅಥವಾ ದೇವರ ಆರಾಧನೆಯ ಸಭೆಯಲ್ಲಿ ಊಟ ಮಾಡುವದು ಹಕ್ಕಾಗಿರುವದಿಲ್ಲ. ಏನೆ ಯಾದರೂ, ಈ ವರದಾನದ ಮೂಲಕ ದೇವರಿಗೆ ಮಹಿಮೆಯನ್ನು ತರಬಹುದು - ಈ ವರದ ನಿಮಿತ್ತ ಅಗತ್ಯವಿದ್ದವರಿಗೆ ಕರ್ತನ ಹೆಸರಿನಲ್ಲಿ ಆಹಾರವನ್ನು ನೀಡುವದು (ಕೊಲೆಸ್ಸೆ 3:17).

ಅದೇ ರೀತಿಯಾಗಿ ಸಭೆಯಲ್ಲಿ ಸ್ತ್ರೀಯರು ಮೌನವಾಗಿರಬೇಕೆಂದು ಪೌಲನು ನಿರ್ದಿಷ್ಟ ವಾಗಿ ತಿಳಿಸಿರುವನು (1 ಕೊರಿಂಥ 14:34). ಅನೇಕ ಸ್ತ್ರೀಯರು ಉಪದೇಶ ಮಾಡುವ ವರವನ್ನು ಹೊಂದಿರುವದು ಸ್ಪಷ್ಟವಾಗಿದೆ, ಆದರೆ, ಕಾರಣವೇನೇ ಇದ್ದರೂ ಅವರು ಸಭೆಯಲ್ಲಿ ಪುರುಷರ ಮುಂದೆ ಉಪದೇಶ ಮಾಡಬಾರದು ಎಂದು ಕರ್ತನು ನಿರ್ಬಂಧಿಸಿದ್ದಾನೆ.[37] ಒಂದು ಸಂದರ್ಭದಲ್ಲಿ, ಪ್ರಿಸ್ಕಿಲ್ಲಳು ಸಭೆಯಿಂದ ಹೊರಗೆ ಅಪೊಲ್ಲೋಸನಿಗೆ ಉಪದೇಶ ಮಾಡಿದಳು, ಮತ್ತು ಆಕೆಯ ಈ ಕ್ರಿಯೆಗೆ ಅಭ್ಯಾಂತರವಾಯಿತೆಂಬ ಸಾಕ್ಷಾಧಾರಗಳಿರುವದಿಲ್ಲ (ಅಪೊಸ್ತಲರಕೃತ್ಯಗಳು 18:24-28 ನೋಡಿ).

ಒಬ್ಬನು ವಾದ್ಯಗಳನ್ನು ನುಡಿಸುವದಾದರೆ ಅದನ್ನು ಜನರ ಮನರಂಜನೆಗಾಗಿಯೂ ಮತ್ತು ಜನರು ಉತ್ತಮ ಜೀವಿತವನ್ನು ಜೀವಿಸುವದಕ್ಕೂ ಅದರಿಂದ ಉತ್ತೇಜನವನ್ನು ನೀಡಿ ಹಾಗೂ ದೇವರ ಉಪದೇಶಗಳಿಗೆ ಮಾರ್ಗದರ್ಶನವನ್ನು ನೀಡಬಹುದು. ಆದರೂ ಸಭೆಯ ಆರಾಧನೆಯಲ್ಲಿ ಅದನ್ನು ಪರಿಚಯಿಸುವ ನಿಯಮವಿರುವದಿಲ್ಲ. ನಾವು ಮಾಡುವಂತ ಎಲ್ಲಾ ಕ್ರಿಯೆಗಳು ದೇವರ ಅಧಿಕಾರವುಳ್ಳ ಚಿತ್ತಕ್ಕೆ ಒಳಪಟ್ಟು ಆ ಜೀವಿತವು ದೇವರಿಗೆ ಪ್ರತಿದಿನದ ಯಜ್ಞವೂ ಮತ್ತು ಕಾಣಿಕೆಯಾಗಿರಬೇಕು. ಎಂದು ಪೌಲನು ರೋಮಾಪುರದವರೆಗೆ ಸೂಚಿಸಿದನು. ಹೇಗೂ ಜೀವಿತದಲ್ಲಿ ನಾವು ಮಾಡುವಂತ ಸಕಲ ಕಾರ್ಯಗಳು, ಸಾಮಾನ್ಯ ಸಭೆಗೆ ಯೋಗ್ಯವಾಗಿರುವದಿಲ್ಲವೆಂಬ ವ್ಯಾಖ್ಯಾನವಾಗಿದೆ.

ಆಕ್ಷೇಪಣೆ 5: *"ಆರಾಧನೆಯಲ್ಲಿರುವ ವಾದ್ಯ ಸಂಗೀತವು ರಕ್ಷಣೆಯ ವಿಷಯ ವಾಗಿರುವದಿಲ್ಲ."* ಈ ಆಕ್ಷೇಪಣೆಗೂ ಒಂದು ಪ್ರಶ್ನೆಯಿದೆ. ಅದೇನೇಂದರೆ, ಈ ವಿಷಯವು ಪರಿಶೀಲನೆಗೆ ಒಳಪಡಬೇಕು. ಇದನ್ನು ಸರಳವಾಗಿ ನಂಬಬೇಕೆ ವಿನಃ ಅನಗತ್ಯವೆಂದು ತಿಳಿಯುವುದು. ದೇವರು ನಮ್ಮ ಹಾಗೆ ಯೋಚಿಸುವವನಲ್ಲ, ನಾವು ದೇವರ ಆರಾಧನೆಗೆ ಸೇರಿ ಬರುವಾಗ ಗಂಭೀರವಾದ ಕಾರ್ಯಗಳನ್ನು ಮಾಡುವದು ಬಹು ಪ್ರಾಮುಖ್ಯವಾಗಿರುತ್ತದೆ. ಇದು ರಕ್ಷಣೆಯ ವಿಷಯ ಎಂಬುದನ್ನು ನಾನರಿಯೆನು ಆದರೆ ವಾದ್ಯಗಳನ್ನು ಉಪಯೋಗಿಸುವದು ಹೊಸ ಒಡಂಬಡಿಕೆಯಲ್ಲಿ ಅಧಿಕೃತಗೊಂಡಿರುವದಿಲ್ಲ.

ಆಕ್ಷೇಪಣೆ 6: *"ಈ ವಿಷಯಗಳ ಕುರಿತು ಏಕೆ ವಿಭಜನೆಗಳುಂಟಾಗ ಬೇಕು?"* ಪದಗಳ ಅರ್ಥದ ಪ್ರಕಾರ ಮತ್ತು ಚರಿತ್ರೆಯ ಪ್ರಕಾರ, ಮತ್ತು ಆದಿ ಕ್ರೈಸ್ತರ ಸಭೆಗಳಲ್ಲಿ ಯಾಂತ್ರಿಕ

ವಾದ ವಾದ್ಯಗಳು ಇರಲಿಲ್ಲವೆಂಬ ಸೂಚನೆಗಳುಂಟು, ವಾದ್ಯಗಳನ್ನು ಪರಿಚಯಿಸುವವರು ವಿಭಜನೆಗಳನ್ನುಂಟು ಮಾಡುತ್ತಾರೆ. ಆರಾಧನೆಯಲ್ಲಿ ವಾದ್ಯಗಳನ್ನು ಏಕೆ ಉಪಯೋಗಿಸ ಬಾರದು ಎಂದು ಹೇಳುವ ಜನರ ಕುರಿತು ನಾನು ತಿಳಿದಿರುವದಿಲ್ಲ.

ಚರ್ಚೆಯಲ್ಲಿರುವಂತ ಮೂಲ ನಿಯಮಗಳೇನೆಂದರೆ ಯಾರಾದರೂ ಒಂದು ಸಂಗತಿಯನ್ನು ಬದಲಾಯಿಸಿದರೆ ಆ ಸಂಗತಿಯ ಮೇಲೆ ಸಕರಾತ್ಮಕವಾದಂತ ಯೋಚನೆಗಳನ್ನು ಅಭಿವೃದ್ಧಿ ಪಡಿಸಬೇಕು, ಮತ್ತು ವಾದ್ಯ ಸಂಗೀತದ ಕುರಿತು ಹೊಸ ಒಡಂಬಡಿಕೆಯ ಆರಾಧನೆಯಲ್ಲಿ ಯಾವುದೇ ಸಾಕ್ಷಿಗಳಿರುವದಿಲ್ಲ. ಚರಿತ್ರೆಯಲ್ಲಿ ನೋಡುವಂತೆ ಯಾಂತ್ರಿಕ ವಾದ್ಯಗಳನ್ನು ಪರಿಚಯಿಸಿದ್ದಾರೋ ಅಂದರೆ ಯಾವ ಗುಂಪಿನಲ್ಲಿ ವಾದ್ಯವಿಲ್ಲದೆ ಹಾಡುತ್ತಿದ್ದರೋ, ಅಂತಹ ಗುಂಪಿಗೆ ವಾದ್ಯಗಳ ಸಂಗೀತವನ್ನು ಪರಿಚಯಿಸಿದಾಗ, ಅಲ್ಲಿ ವಿಭಜನೆಯುಂಟಾಯಿತು.

ಈ ಅಧ್ಯಾಯನದಲ್ಲಿ ನಮ್ಮೊಂದಿಗೆ ತೊಡಗಿಸಿಕೊಂಡಿದ್ದಕ್ಕಾಗಿ ವಂದನೆಗಳು. ಹೊಸ ಒಡಂಬಡಿಕೆಯ ಯುಗದಲ್ಲಿ ವಾದ್ಯಗಳ ಸಂಗೀತದ ಉಪಯೋಗವನ್ನು ದೇವರು ಅಧಿಕೃತಪಡಿಸಿರುವದಿಲ್ಲ. ಒಂದು ವೇಳೆ ಅದನ್ನು ಉಪಯೋಗಿಸಬೇಕೆಂದು ದೇವರು ಬಯಸಿದ್ದರೆ, ಅದನ್ನು ಒಪ್ಪುವಂತ ರೀತಿಯಲ್ಲಿ ಮಾರ್ಗಸೂಚಿಯನ್ನು ನೀಡುತ್ತಿದ್ದನು. ಇಲ್ಲಿರುವಂತ ಸ್ಪಷ್ಟತೆಯೇನೆಂದರೆ ವಾದ್ಯಗಳಿಲ್ಲದೆ ಹಾಡುವಂತದ್ದನ್ನು ದೇವರು ಪೂರ್ಣವಾಗಿ ಅಧಿಕೃತಪಡಿಸಿ ಅದನ್ನು ಸಭೆಯಲ್ಲಿ ಜನರು ಹಾಡುವಂತೆ ದೇವರು ಯೋಗ್ಯಪಡಿಸಿದ್ದಾನೆ. ಯಾಂತ್ರಿಕ ವಾದ್ಯಗಳನ್ನು ಉಪಯೋಗಿಸುವದು ಕೊಳೆಚೆ ನೀರಿನಲ್ಲಿ ಹೋದಂತೆ ಅದು ಕೇವಲ ವಿಭಜನೆಯನ್ನುಂಟು ಮಾಡದೆ, ಅದು ಅದರ ಪರಿಣಾಮವನ್ನು ಸಹ ಅನುಭವಿಸಬೇಕಾಗುತ್ತದೆ.

---

ಟಿಪ್ಪಣಿಗಳು

[1]ಅನ್ಯ ಭಾಷೆಯನ್ನು ಮಾತನಾಡುವಾಗ ತನ್ನ ಈ ಬರವಣಿಗೆಯನ್ನು ಕೊರಿಂಥದವರು ಉಪ ಯೋಗಿಸಬೇಕೆಂದು ಪೌಲನು ಬಯಸಿದನು. "ಯಾವನಾದರೂ ತನ್ನನ್ನು ಪ್ರವಾದಿಯೆಂದಾಗಲಿ ದೇವರಾತ್ಮನಿಂದ ನಡಿಸಲ್ಪಡುವವನೆಂದಾಗಲಿ ಭಾವಿಸಿಕೊಂಡರೆ ನಾನು ನಿಮಗೆ ಬರೆದಿರುವ ಸಂಗತಿಗಳು ಕರ್ತನ ವಿಧಿಯೇ ಎಂದು ಚೆನ್ನಾಗಿ ತಿಳುಕೊಳ್ಳಲಿ" (1 ಕೊರಿಂಥ 14:37). ಸಭೆಯಲ್ಲಿ ನೈತಿಕತೆಯನ್ನು ಕಾಪಾಡುವದಕ್ಕಾಗಿ ಪೌಲನ ಬರವಣಿಗೆಯನ್ನು ಬಳಸಬೇಕಿತ್ತು. [2]ಈ ಪದವು ಎಚ್ಚರಿಕೆ ಅಥವಾ ಸಲಹೆಗೆ ಸಹಾಯಕವಾಗುತ್ತದೆ (Walter Bauer, *A Greek-English Lexicon of the New Testament and Other Early Christian Literature*, 2d ed., rev. William F. Arndt and F. Wilbur Gingrich [Chicago: University of Chicago Press, 1957], 546). [3]ದಿ ಗ್ರೀಕ್ ರೂಟ್‌ವರ್ಡ್ *charis* ಈ ವಾಕ್ಯದಲ್ಲಿ ಇದನ್ನು "ಕೃಪೆ" ಮತ್ತು "ಕೃತಜ್ಞತೆ" ಎನ್ನಲಾಗಿದೆ, ಆದರೆ ಇನ್ನೊಂದು ಅರ್ಥ "ವಂದನೆ" (Ibid., 885-87). [4]"ಹಾಡು" ಎಂಬುದರ ಸಂಕೇತ ವಿನ, ಅಕ್ಷರಶ ಯೇಸು ಅನ್ಯರಿಗೆ ಹಾಡಲಿಲ್ಲ. [5]C. G. Wilke and Wilibald Grimm, *A Greek-English Lexicon of the New Testament*, trans. and rev. Joseph H. Thayer [Edinburgh, Scotland: T. & T. Clark, 1901; reprint, Grand Rapids, Mich.: Baker Book House, 1977]. ತಾಯರ್ ಮತ್ತು ಅರೆಂಡ್ಸ್‌ರವರು ಗಿಂಗ್ರಚ್ ಬೊವೆಲ್‌ರವರ ಎರಡು ಪ್ರಮುಖವಾದ ಗ್ರೀಕ್ ಮತ್ತು ಇಂಗ್ಲೀಷ್ ಲೆಕ್ಸಿಕನ್ ಅನುವಾದವು ಹೊಸ ಒಡಂಬಡಿಕೆಯ ಬೋಧನೆಗೆ ಮೂಲವಾಗಿದೆ. ಅವುಗಳು ಪುರಾತನ ಗ್ರೀಕ್ ಭಾಷೆಯ ಕ್ರಮಕ್ಕಿಂತಲೂ, ಅವುಗಳ ಪದಗಳನ್ನು ಹೊಸ ಒಡಂಬಡಿಕೆಯ ಕಾಲದಲ್ಲಿ ಹೆಚ್ಚು ಗಮನಾರ್ಹವಾಗಿ ಬಳಸಲಾಗಿದೆ. ಆ ಗ್ರೀಕ್ ಭಾಷೆಯ ಹೆಚ್ಚು ಬಳಸುವಿಕೆಗಾಗಿ, Henry George Liddell and Robert Scott, *A Greek-English Lexicon,* ed. E. A. Barber (Oxford: Oxford University Press, 1968). [6]Bauer, 18. [7]Thayer, 637. [8]Bauer, 844. [9]Thayer, 675. [10]Bauer, 899.

[11]ಇಲ್ಲಿರುವ ಗ್ರೀಕ್ ಪ್ರಯತ್ನವನ್ನು ನ್ಯಾಯಯುತವಾಗಿ ಅದರ ಸ್ಥಾನ ಮತ್ತು ವಾದ್ಯವನ್ನು ಅರಿಯಲು ಉಪಯೋಗಿಸಲಾಗಿದೆ (H. E. Dana and Julius R. Mantey, *A Manual Grammar of the Greek New Testament* [Toronto: Macmillan Co., 1955], 86-91). [12]ತಾಂತ್ರಿಕವಾದ ವಾದ್ಯಗಳನ್ನು ಬಳಸುವುದನ್ನು ಊರ್ಜಿತಗೊಳಿಸಲಾಗಿದೆ ಎಂದು ಕೆಲವರ ಅಭಿಪ್ರಾಯ, ಯಾವುದೇ ದಾರ್ಮಿಕ ಗುಂಪಿನವರು ಇದನ್ನು ಮಾಡಲೇಬೇಕು ಎಂದು ಹೇಳುವದನ್ನು ನಾನು ಗಮನಿಸಿರುವದಿಲ್ಲ, ಆದರೆ ಪದವು ಜನ್ಮತಾ ಬಂದಿರುವದರಿಂದ ತಾಂತ್ರಿಕವಾದ ವಾದ್ಯಗಳು ಅಗತ್ಯತೆಯನ್ನು ದೇವರು ತಿಳಿಸಿರುವ ಸೂಚನೆ ಎಂಬ ಅಭಿಪ್ರಾಯ. ನಂತರ, ಆ ವಾದ್ಯಗಳು ತಂತಿ ವಾದ್ಯಗಳಾಗಿರಬಾರದು, ಅದನ್ನು ವಾಕ್ಯವು ಅಧಿಕೃತ ಪಡಿಸಿರುತ್ತದೆ. ಪೌಲ ಸೀಲರು ಸಹಜವಾಗಿ ಯಾವುದೇ ವಾದ್ಯಗಳನ್ನು ಹೊಂದಿರಲಿಲ್ಲ ಹಾಗು ಅವರಿಗೆ ಯಾವುದೇ ತಾಂತ್ರಿಕವಾಗಿ ವಾದ್ಯಗಳು ಸೆರೆಮನೆಯಲ್ಲಿ ದೊರಕಿರಲಿಲ್ಲ. ಆದಾಗ್ಯೂ ಅವರು ಹಾಡುತ್ತಾ ಪ್ರಾರ್ಥಿಸುತ್ತಿದ್ದರು (ಅಪೊಸ್ತಲರಕೃತ್ಯಗಳು 16:25ನ್ನು ನೋಡಿರಿ). [13]ಚಿಮುಕಿಸುವ ಮತ್ತು ಸುರಿಯುವ ದೀಕ್ಷಾಸ್ನಾನದ ಕುರಿತಾಗಿಯು, ಅದೇ ವಿಧವಾದ ತಪ್ಪು ಅಭಿಪ್ರಾವಿದೆ. [14]*A cappella* is an Italian phrase (from the Latin) meaning “according to the chapel.” [15]ಈ ಪತ್ರಿಕೆಯ ಮುಂದಿನ ಅಧ್ಯಯನದಲ್ಲಿ ಸಭಾ ಚರಿತ್ರೆಯನ್ನು ನಾನು ನೀಡುವೆನು. ತಾತ್ಕಾಲಿಕ ವಾಗಿ, ಮೆಕ್ ಕ್ರಿಟೆಕ್ ಮತ್ತು ಸ್ಟ್ರಾಂಗ್‌ರವರ ಹೇಳಿಕೆಯನ್ನು ಗಮನಿಸಿ (ಈ ಬರಹಗಾರರು ಚರ್ಚ್ ಆಫ್ ಕ್ರೈಸ್ಟನ ಸದಸ್ಯರಲ್ಲ): ಗ್ರೀಕರು ಮತ್ತು ಯೆಹೂದ್ಯರು ತಮ್ಮ ಪರಿಶುದ್ಧವಾದ ಹಾಡುಗಳನ್ನು ಹಾಡು ವಾಗ ವಾದ್ಯಗಳನ್ನು ಬಳಸುವ (ರೂಡಿಯನ್ನು) ಮಾಡಿಕೊಂಡಿರಲಿಲ್ಲ. ಕ್ರೈಸ್ತರಾಗಿ ಪರಿವರ್ತನೆಗೊಂಡವರು, ಈ ಹಾಡುಗಳ ಬಗ್ಗೆ ಅರಿತವರಾಗಿದ್ದರು. ಆದಾಗ್ಯೂ ಆ ಮೊದಲ ಕ್ರೈಸ್ತರು ತಮ್ಮ ಧಾರ್ಮಿಕ ಸಮಾರಂಭದಲ್ಲಿ ವಾದ್ಯ ಸಂಗೀತವನ್ನು ಬಳಸಲಿಲ್ಲ. (John McClintock and James Strong, *Cyclopædia of Biblical, Theological, and Ecclesiastical Literature* [Grand Rapids, Mich.: Baker Book House, 1879], 6:759). [16]ಇನ್ನೊಂದು ಹಿನ್ನೆಲೆಯಲ್ಲಿ *symphonia* ಎಂಬ ಪದವನ್ನು ಲೂಕ 15:25ರಲ್ಲಿ ಮತ್ತು “ಅನೇಕ ವಾದ್ಯಗಳಿಂದ ಉಂಟಾಗುವ ಸಂಗೀತ” ವಾದ್ಯ ಗುಂಪು, “ಸಂಗೀತದ ಸಮೂಹ” ಎಂದು ನೋಡುತ್ತೇವೆ (Bauer, 788) ಇದರ ನಾಮಪದವು ವಿವಿರವಾಗಿದೆ *kitharizo* 1 ಕೊರಿಂಥ 14:7 ಮತ್ತು ಪ್ರಕಟನೆ 14:2 ತಂತಿವಾದ್ಯ ಬಾರಿಸು, ಅಥವಾ ಕೊಳಲನ್ನು ಊದು (Bauer, 433); (ಪ್ರಕಟನೆ 14:2; 18:22ರಲ್ಲಿದೆ) ಅದರ ಅರ್ಥ ತಂತಿವಾದ್ಯ ಬಾರಿಸುವವನು. ತನ್ನದೇ ಆದ ಹಾಡಿಗೆ ವಾದ್ಯ ಮುಡಿಸುವವನು (Bauer, 433). ಆದಾಗ್ಯೂ ಇನ್ನೊಂದು ಪದವನ್ನು (ಪ್ರಕಟನೆ 18:22)ರಲ್ಲಿ *mousikeos* (“ಸಂಗೀತ”) “ಸಂಗೀತವನ್ನು ಹೊಂದುವುದು” ಎಂಬ ವಿವರಣೆ “ಸಂಗೀತಗಾರ” (Bauer, 530). [17]ಆಮೋಸ್ 6:4, 5 ದಾವೀದನ ಸಂಗೀತವನ್ನು ಖಂಡಿಸುತ್ತದೆ ಎಂಬುಂದು ಕೆಲವರ ಅಭಿಪ್ರಾಯ, ಅದನ್ನು ದೇವರು ಊರ್ಜಿತಗೊಳಿಸಿರುವದಿಲ್ಲ. ಈ ವಾಗ್ವಾದವು, ಹೇಗೂ ಅನದಿಕೃತವಾಗಿದೆ. ಅದನ್ನು ಪೂರ್ವಕಾಲ ವೃತ್ತಾಂತಕ್ಕೆ ಹೋಲಿಸಿದಾಗ ಅದು ಅನರ್ಹ. ಆದರೆ ಆಮೋಸನು ಉನ್ನತಮಟ್ಟದ ಇಸ್ರಾಯೇಲ್ಯರು “ತಮ್ಮ ತಂತಿವಾದ್ಯವನ್ನು ದಾವೀದನಂತೆ ಬಾರಿಸುತ್ತಿದ್ದರೂ, ದುರ್ನಡತೆಯುಳ್ಳವರಾಗಿದ್ದರು” ಎಂದು ತಿಳಿಸಿರುವನು. ಆದರೆ ಅವರು “ಯೋಸೆಫನ ಹಾಳಾದ ಸ್ಥಿತಿಯನ್ನು” ಮರೆತ್ತಿದ್ದರು (6:6). ಇದು ಹಳೆ ಒಡಂಬಡಿಕೆಯ ಅಪಾರ್ಥದ ಉದಾಹರಣೆಯಷ್ಟೆ. [18]NIVಯಲ್ಲಿನ ಗ್ರೀಕ್ ಪದವು “ಗೀತ” ಎಂಬುದಾಗಿದ್ದು, ಸಾಲೋಮೋನ್ ಎಂಬ ಪದವನ್ನು “ಕೀರ್ತನೆ” ಎಂದು ಅನುವಾದಿಸಲಾಗಿದೆ. ಮತ್ತು KJV ASV NKJVಯಲ್ಲಿ “ಕೀರ್ತನೆ” ಎಂದು ಅನುವಾದಿಸಿದೆ. [19]ಅದಕ್ಕಾಗಿ ನಿರ್ದಿಷ್ಟವಾದ ಮಾರ್ಗಸೂಚಿ ಉಂಟು (ಯಾಜಕಕಾಂಡ 7:11-15). [20]KJVಯ ಹೇಳಿಕೆಯ ಅಂಶಕ್ಕೆ ಒಳಪಟ್ಟಿರುತ್ತದೆ. ಗ್ರೀಕ್‌ನ ಮೂಲ ಪದ *semaino* “ಸಂಕೇತವನ್ನು ನೀಡು” ಎಂಬ ಅರ್ಥ; NIVಯಲ್ಲಿ ಸರಳವಾಗಿ “ತಿಳಿಯಪಡಿಸು” ಎಂಬುದಾಗಿದೆ.

[21]J. Curtis Manor, *Workbook on Denominational Doctrines*, vol. 1, *Basic Dogmas and Attitudes,* rev. ed. (Mariposa, Calif.: By the author, 1996), 95. [22]ದೇವಾಲಯದ ಆರಾಧನೆಯ ಕುರಿತು ಪೌಲನು ಅರಿತಿದ್ದನು. ಅವನು ಗಮಲಿಯೆಂಬ ರಬ್ಬಿಯ ಬಳಿಯಲ್ಲಿ ತರಬೇತಿ ಪಡಿದಿದ್ದನು (ಅಪೊಸ್ತಲರಕೃತ್ಯಗಳು 22:3). [23]ಆಧುನಿಕ ಕಾಲದ ಗ್ರೀಕರ ಪರಿಶುದ್ಧ ಸಂಗೀತಕ್ಕೆ ಎಂಬ ಪದವನ್ನು ಬಳಸಲಾಗಿತ್ತು. ಪೂರ್ವದೇಶದ ಜನರ ಸಭೆಯಲ್ಲಿ ಕೇವಲ ಹಾಡುತ್ತಿದ್ದರೆ ವಿನ, ವಾದ್ಯದ ಪರಿಚಯವು ಅವರಿಗಿರಲಿಲ್ಲ, ಆದರೆ ಎಕ್ಲೀಸಿಯಾಸ್ಟಿಕಲ್ ಆರ್ಕಿಯಾಲಜಿಯ ವಿದ್ಯಾರ್ಥಿಗಳು ವಾದ್ಯಗಳನ್ನುಒಪ್ಪಿಕೊಂಡರೂ ಅದನ್ನು ಸಭೆಯಲ್ಲಿ ಬಳಸಲು ಒಪ್ಪಲಿಲ್ಲ, ಆದಿ ಸಭೆಯಲ್ಲೂ ಇದರ ಬಳಸುವಿಕೆ ಇರಲು ಸರ್, ಜಾನ್ ಹಾಕಿನ್ಸ್, ರೋಮಿಷ್ ಬರಹಗಾರರ ಎರುಡೈಟ್‌ನಲ್ಲಿರುವಂತೆ (ಅವರು ಪಾಂಡಿತ್ಯ ಹೊಂದಿದ್ದರು) ವರ್ಕ್ ಆನ್ ದಿ ಹಿಸ್ಟರಿ ಆಫ್ ಮ್ಯೂಸಿಕ್, ಮೇರ್ಸ್ ಫೋಪ್

ವಿಟಾಲಿನ್, ಇನ್ ಕ್ರಿ.ಪೂ. 660. ಅವರು ಸಭೆಯಲ್ಲಿ 'ಆರ್ಗನ್' ವಾದ್ಯವನ್ನು ಪ್ರಥಮವಾಗಿ ಪರಿಚಯಿಸಿದರು. ಕ್ರಿ.ಶ. 1250ರಲ್ಲಿದ್ದ ಥಾಮ್ ಅಕ್ವೆನ್‌ರವರು: "ಸಭೆಯು, ತಂತಿವಾದ್ಯ ಅಥವಾ ಇನ್ನಿತರೆ ವಾದ್ಯಗಳನ್ನು ಬಳಸದೆ ಇರುವದು ಯೂದಾಯರ ಆಚರಣೆಯನ್ನು ಅಲ್ಲಗಳೆದ ಸೂಚನೆಯಾಗಿದೆ," ಎಂಬ ಬಲವಾದ ಪದ ಪ್ರಯೋಗವನ್ನು ಮಾಡಿರುವರು (ಮೆರ್ ಕ್ಲಿಂಟಕ್ ಅಂಡ್ ಸ್ಟ್ರಾಂಗ್, 739). [24]ಆದಿ ಸಭೆಯ ಇತಿಹಾಸವನ್ನು ಅಪೊಸ್ತಲರ ಪುಸ್ತಕದಲ್ಲಿ ದಾಖಲುಮಾಡಲಾಇದೆ ಸಭೆಯು ಸ್ಥಾಪನೆಗೊಂಡ ನಂತರ, ಸುವಾರ್ತೆಗೆ, ಯೆಹೂದ್ಯರಿಗಿಂತ ಅನ್ಯರ ಪ್ರತಿಕ್ರಿಯೆ ಹೆಚ್ಚಾಗಿತ್ತು. [25]ನೀರೋ ಚಕ್ರವರ್ತಿಯ ಕಾಲದಲ್ಲಿ ಕ್ರೈಸ್ತರಿಗೆ ಉಂಟಾದ ಹಿಂಸೆಯು (ಪೌಲನಿಗೂ ಸಹ ಉಂಟಾಯಿತು) ಸ್ಥಳೀಯ ವಾಗಿತು; ಅದು ರೋಮಾ ಸಾಮ್ರಾಜ್ಯದ ಗಣನೆಗೆ ಬರಲಿಲ್ಲ. [26]ಮೆರ್‌ಕ್ರಿಂಕ್ಟರ್ ಮತ್ತು ಸ್ಟ್ರಾಂಗ್‌ರವರ ಮಾಹಿತಿಯಂತೆ, 900ವರ್ಷಗಳ ನಡುವೆ ನಡೆಯಿತು. [27]This is the date of the Edict of Milan, which recognized the legitimacy of Christianity (Graydon F. Snyder, "Christianity," *Anchor Bible Dictionary,* vol. 1, ed. D. N. Freedman [New York: Doubleday, 1992], 970). [28]ಯೋಹಾನನ ದರ್ಶನದಲ್ಲಿ ಕಂಡಂತ ವಿಷಯಗಳ ಕುರತು ನಿರ್ಧಾರ ಮಾಡಬಾರದೆಂಬ ಎಚ್ಚರಿಕೆಯನ್ನು ನೀಡಲಾಗಿದೆ. ಅದು ಹೊಸ ಒಡಂಬಡಿಕೆಯಲ್ಲಿನ ನೆನಪಾಗಿರುತ್ತದೆ. ಇದು ಯೋಹಾನನ ದರ್ಶನದ ಕುರಿತಾದ ಚಿಂತನೆ ಮಾತ್ರವಾಗಿರುತ್ತದೆ. ದೇವರ ಚಿತ್ತಕ್ಕೆ ಅನುಗುಣವಾಗಿ ನಿಯಮಗಳು ಅನ್ವಯಿಸುತ್ತವೆ. ಇತರ ಎಚ್ಚರಿಕೆಗಳೊಂದಿಗೆ ಹೋಲಿಕೆ ಮಾಡಿದಾಗ ಅದು ಸ್ಪಷ್ಟವಾಗುತ್ತದೆ. [29]ದೇವರ ಪ್ರಕಟನೆಗೆ ಅನುಗುಣವಾಗಿ ಉಂಟಾಗುವ ಐಕ್ಯತೆಯ ಮನವಿಯನ್ನು ಮತ್ತು ಮಾನವ ಪ್ರಯತ್ನದಿಂದ ದೇವರ ಬೋಧನೆ ಮತ್ತು ಸಲಹೆಗಳನ್ನು ಹೊಂದಾಣಿಕೆ ಮಾಡುತ್ತಾರೆ. [30]ಕ್ರೈಸ್ತರಲ್ಲಿ ಈ ಸದ್ಗುಣಗಳು "ಅಭಿವೃದ್ಧಿಯಾಗಬೇಕೆಂದು" ಪೇತ್ರನು ತಿಳಿಸಿರುವನು (2 ಪೇತ್ರ 1:8).

[31]ಮುಳುಗುವ ದೀಕ್ಷಾಸ್ನಾನವನ್ನು ಸಿದ್ಧಾಂತ ಪಡಿಸುವದಕ್ಕಾಗಿ, ಪೌಲನು ಈ ವಾಕ್ಯವನ್ನು ಬಳಸಿ ತರ್ಕಮಾಡುತ್ತಿರುವದಿಲ್ಲ (ಮುಳುಗುವ ಕುರಿತು ಕೆಲವರು ಅತಿ ಸರಳೀಕರಿಸಿರುವರು) ಅದರ ಬದಲಾಗಿ ಹೊಸದಾಗಿ ಹುಟ್ಟಿರುವವರು ದೇವರ ಬಯಕೆಯಂತೆ ವರ್ತಿಸಬೇಕು. ದೇವರ "ನೀತಿಯ ನಿಯಮಕ್ಕೆ' (ರೋಮಾಪುರ 6:13) ನಾವುಗಳು ಒಳಗಾಗಬೇಕು. ಪಾಪಕ್ಕೆ ಒಳಗಾಗಬಾರದು. [32]ಆರಾಧನೆಯ ಬದಲಾಗಿ, ಭೂಗರ್ಭ ಶಾಸ್ತ್ರದಲ್ಲಿ ಸಾಕ್ಷಿಯು ಅಡಕವಾಗಿದೆ. ಆರಾಧಿಸುವವರು ಚಿಕ್ಕದಾದ ಹರಕೆಯನ್ನು ಸಲ್ಲಿಸುವರ, ಅವರು ನಿಜವಾದ ವ್ಯಕ್ತಿಯನ್ನು ಹೊರತುಪಡಸಿ, ಅವರು ಗರ್ಭಗುಡಿಯಲ್ಲಿ ಪೂಜಾವಸ್ತುಗಳನ್ನು ಸಮರ್ಪಿಸುವರು, ದೇವರು ಸಹ ಅಂತಹ ಆಚರಣೆಗಳನ್ನು ನಿರಾಕರಿಸಿರುವದಿಲ್ಲ, ಆದರೆ ಸಕಾರಾತ್ಮಕವಾದ ಆಲೋಚನೆಯು ಅವುಗಳನ್ನು ನಿರಾಕರಿಸುತ್ತದೆ. ಕೆಲವು ಸಾರಿ ಆರಾಧಕರು ಗರ್ಭಗುಡಿಯ ಮುಂದೆ ಮೇಣದ ಬತ್ತಿಗಳನ್ನು ಬೆಳಗಿಸುವರು; ಇದು ಈಗಿನ ಪ್ರಪಂಚದಲ್ಲಿ ಉಂಟಾಗಿರುವ ಬದಲಾವಣೆಯಾಗಿದೆ. [33]ದೂಪಸುಡುವುದು, ಅನ್ಯರ ರೂಢಿಯಾಗಿತ್ತು. ಅದರ ಸಂಗಡ ಆರಾಧನೆಯನ್ನು ಮಾಡುತ್ತಿದ್ದರು. ಅದು ಬರವಣಿಗೆಯಲ್ಲಿ ಮಾತ್ರ ತಿಳಿಯದೆ, ಭೂಗರ್ಭಶಾಸ್ತ್ರದ ಅಧ್ಯಾಯದಿಂದಲೂ ಸಾಬೀತುಪಡಿಸಲಾಗಿದೆ. [34]M. C. Kurfees, *Instrumental Music in the Worship or the Greek Verb Psallo, Philologically and Historically Examined* (Nashville: Gospel Advocate Co., 1969), 71-78. [35]ಸೊಲೊಮೋನನ ಅಂಗಳವು (ಪಡಸಾಲೆ) ಯೆರುಸಲೋಮಿನ ದೇವಾಲಯದ ಒಂದು ಭಾಗವಾಗಿದ್ದು ಅನ್ಯರ ಅಂಗಳ ಎಂದು ಕರೆಯಲ್ಪಟ್ಟಿತ್ತು. [36]ಈ ಹೊತ್ತಿನ ಸಭೆಗಳು ಕಟ್ಟಡ ಮತ್ತು ಅನುಕೂಲತೆಗಳ ಕುರಿತು ಹೆಚ್ಚು ಗಮನವಿಡುತ್ತಾರೆ ವಿನ ಸುವಾರ್ತೆ, ಕೊರತೆಗಳನ್ನು ನೀಗಿಸುವ, ಹಾಗೂ ಉತ್ತೇಜನ ನೀಡುವ ಕಾರ್ಯಗಳನ್ನು ಅಲಕ್ಷಿಸಿರು ತ್ತಾರೆ. [37]ಪೌಲನ, "ಸ್ತ್ರೀಯರ" ಪಾತ್ರದ ಹೇಳಕೆಯು, ಈಗಿನ ಸಭೆಗಳಿಗೆ ಅನ್ವಯಿಸುವದಿಲ್ಲ ಎಂದು ಅನೇಕ ಸಭೆಯವರು ತಿಳಿದಿರುವರು. ಈ ತರ್ಕಮಾಡುವವರು, ಪೌಲನ ವಿವರಣೆಯನ್ನು ಅರಿತುಕೊಳ್ಳುವದರಲ್ಲಿ ಸಫಲರಾಗಿರುವದಿಲ್ಲ. ಅಂತಹ ನಿಭಂಧನೆಗಳು, ಪಾಪದ ಸೃಷ್ಟಿಗೂ ಮತ್ತು ಪರಿಚಯಕ್ಕೂ ಮೂಲವಾಗುತ್ತದೆ (1 ತಿಮೊಥೆ 2:11-14). ಸೃಷ್ಟಿಯ ವಿಚಾರಕ್ಕೆ ಪೌಲನ ಯೋಜನೆಯು ನಡಿಸುತ್ತದೆ, ಅಂತ ಆಚರಣೆಯನ್ನು ದೃಢಿಕರಿಸುವ ಸಂಸ್ಕೃತಿ ಇರುತ್ತದೆ.